ದೆಹಲಿ ಕರ್ನಾಟಕ ಸಂಘದ

# ಅಭಿಮತ

ಏಪ್ರಿಲ್ 2026 । ಬೆಲೆ ರೂ.1



## ಹೂವು ಹೊರಳುವವು ಸೂರ್ಯನ ಕಡೆಗೆ



ಕೇಂದ್ರ ರೈಲ್ವೇ ಮತ್ತು ಜಲಶಕ್ತಿ ರಾಜ್ಯ ಮಂತ್ರಿಗಳಾದ ಶ್ರೀ ವಿ. ಸೋಮಣ್ಣ ಅವರನ್ನು ಸಂಘದ ಪ್ರಧಾನ ಕಾರ್ಯದರ್ಶಿ ಶ್ರೀ ರಾಧಾಕೃಷ್ಣ, ಖಜಾಂಚಿ ಶ್ರೀಮತಿ ಆಶಾಲತಾ ಎಂ., ಜಂಟಿ ಕಾರ್ಯದರ್ಶಿ ಶ್ರೀಮತಿ ಅಶ್ವಿನಿ ಬಿ.ಎಸ್., ಉಪಾಧ್ಯಕ್ಷೆ ಶ್ರೀಮತಿ ಶೋಭಾ ಗೌಡ, ಕಾರ್ಯಕಾರಿ ಸಮಿತಿಯ ಸದಸ್ಯರುಗಳಾದ ಶ್ರೀ ಕೃಷ್ಣಪ್ಪ ಎಂ., ಮತ್ತು ಶ್ರೀ ನಾರಾಯಣ ಬಿ. ಅವರು ಅಕ್ಕ ಮತ್ತು ಬಸವ ಜಯಂತಿ ಕಾರ್ಯಕ್ರಮಕ್ಕೆ ಆಹ್ವಾನಿಸಿದ ಸಂದರ್ಭ.



ಮಾಜಿ ವಿಧಾನಪರಿಷತ್ತಿನ ಸದಸ್ಯರಾದ ಶ್ರೀ ಹೆಚ್. ವಿಶ್ವನಾಥ ಅವರು 19.04.2026 ರಂದು ಸಂಘಕ್ಕೆ ಭೇಟಿ ನೀಡಿದ ಸಂದರ್ಭದಲ್ಲಿ ನೂತನ ಕಾರ್ಯಕಾರಿ ಸಮಿತಿಯ ಪದಾಧಿಕಾರಿಗಳು ಹಾಗು ಸದಸ್ಯರು ಮತ್ತು ಇತರರೊಂದಿಗೆ.



ಗುರುಗಾಂವ್ ಕನ್ನಡ ಸಂಘವು 26.04.2026 ರಂದು ದೆಹಲಿ ಕರ್ನಾಟಕ ಸಂಘದ ಸಹಯೋಗದೊಂದಿಗೆ ಆಚರಿಸಿದ ಯುಗಾದಿ ಉತ್ಸವ ಸಮಾರಂಭದಲ್ಲಿ ಗುರುಗಾಂವ್ ಕನ್ನಡ ಸಂಘದ ವತಿಯಿಂದ ದೆಹಲಿ ಕರ್ನಾಟಕ ಸಂಘದ ನೂತನ ಕಾರ್ಯಕಾರಿ ಸಮಿತಿಯ ಪದಾಧಿಕಾರಿಗಳು ಮತ್ತು ಸದಸ್ಯರನ್ನು ಅಭಿನಂದಿಸಿದ ದೃಶ್ಯ.

ದೆಹಲಿ ಕರ್ನಾಟಕ ಸಂಘದ
# ಅಭಿಮತ

ಪ್ರಧಾನ ಸಂಪಾದಕರು
ರೇಣುಕಾ ನಿಡಗುಂದಿ

ಸಂಪಾದಕ ಮಂಡಳಿ
ಚಂದ್ರಶೇಖರ ಎನ್.ಪಿ.
ಸಂತೋಷ್ ಕುಮಾರ್ ಉಪಾಧ್ಯಾಯ
ಪ್ರಕಾಶ್ ಶೆಟ್ಟಿ ಉಳೆಪಾಡಿ
ಹರಿಪ್ರಿಯ ಎಸ್.
ಪ್ರಸಾದ್ ನಾಯ್ಕ್
ನಟರಾಜ್ ಸಿ.

ದೆಹಲಿ ಕರ್ನಾಟಕ ಸಂಘದ
ಕಾರ್ಯಕಾರಿ ಸಮಿತಿ–2026–28

ಅಧ್ಯಕ್ಷರು
ರೇಣುಕುಮಾರ್ ಆರ್.
9868393953

ಉಪಾಧ್ಯಕ್ಷರು
ವಸಂತ ಶೆಟ್ಟಿ ಬೆಳ್ಳಾರೆ
9958697823
ಶೋಭಾ ಗೌಡ
8800588150

ಪ್ರಧಾನ ಕಾರ್ಯದರ್ಶಿ
ರಾಧಾಕೃಷ್ಣ
9818252183

ಖಜಾಂಚಿ
ಆಶಾಲತಾ ಎಂ.
9891249149

ಜಂಟಿ ಕಾರ್ಯದರ್ಶಿಗಳು
ಸಂತೋಷ ಜಿ.
9911235783
ಅಶ್ವಿನಿ ಬಿ.ಎಸ್.
9036235665

ಸಮಿತಿ ಸದಸ್ಯರು
ಮೂಜಾ ಪಿ. ರಾವ್
9810882498
ಶಿವಪ್ಪ ಎಂ.
9868159328
ಡಾ. ವೆಂಕಟಾಚಲ ಜಿ. ಹೆಗಡೆ
9312712476
ಡಾ. ಎಂ.ಎಸ್. ಶಶಿ ಕುಮಾರ್
9811689327
ನಾರಾಯಣ ಬಿ.
9868393978
ಕೃಷ್ಣಪ್ಪ ಎಂ.
9911156695
ಜಯಶ್ರೀ ಬಸವರಾಜು ಬಿ.ಕೆ.
9560760341
ಶುಭಾ ದೇವಿಪ್ರಸಾದ್
9319762969
ಆರ್. ಹರಿಕೃಷ್ಣ
9971518457
ರಾಜಕುಮಾರ್
9911150475

## ಸಂಪಾದಕೀಯ...

ದೆಹಲಿ ಕರ್ನಾಟಕ ಸಂಘದ ಚುನಾವಣೆಯು ಯಶಸ್ವಿಯಾಗಿ ಪೂರ್ಣಗೊಂಡು ಹೊಸ ಆಡಳಿತ ಮಂಡಳಿ ಅಧಿಕಾರಕ್ಕೆ ಬಂದಿರುವುದು ಸಂಘದ ಪ್ರಜಾಪ್ರಭುತ್ವದ ಪರಂಪರೆಯ ಸಂಕೇತವಾಗಿದೆ. ಸಂಘ ಎಂದರೆ ಕೇವಲ ಒಂದು ಸಂಸ್ಥೆಯಲ್ಲ; ಅದು ರಾಜಧಾನಿಯಲ್ಲಿ ನೆಲೆಸಿರುವ ಕನ್ನಡಿಗರ ಸಾಂಸ್ಕೃತಿಕ ನೆನಪು, ಭಾಷಾ ಬಂಧ ಮತ್ತು ಸಾಮಾಜಿಕ ಒಗ್ಗಟ್ಟಿನ ಜೀವಂತ ವೇದಿಕೆ. ಇಂತಹ ವೇದಿಕೆಗೆ ಹೊಸ ತಂಡದ ಆಗಮನವು ಹೊಸ ನಿರೀಕ್ಷೆಗಳನ್ನೂ, ಹೊಣೆಗಾರಿಕೆಗಳನ್ನೂ ತಂದಿದೆ.

ಹೊಸ ಆಡಳಿತ ಮಂಡಳಿ ಕೇವಲ ಕಾರ್ಯಕ್ರಮಗಳ ಆಯೋಜನೆಗೆ ಸೀಮಿತವಾಗದೆ, ಕನ್ನಡ ಭಾಷೆ, ಸಾಹಿತ್ಯ, ಸಂಸ್ಕೃತಿ ಮತ್ತು ಪ್ರಗತಿಪರ ಚಿಂತನೆಗಳನ್ನು ಇನ್ನಷ್ಟು ವ್ಯಾಪಕವಾಗಿ ಜನರೊಳಗೆ ತಲುಪಿಸುವ ಕೆಲಸ ಮಾಡಲಿ ಎಂಬುದೇ ನಮ್ಮೆಲ್ಲರ ಆಶಯ.

ದೆಹಲಿ ಕರ್ನಾಟಕ ಸಂಘದ ಮುಖವಾಣಿಯಾದ "ಅಭಿಮತ"ಕ್ಕೆ ತನ್ನದೇ ಆದ ಪರಂಪರೆಯಿದೆ. ಆಗಿನ ಅಧ್ಯಕ್ಷರಾದ ಶ್ರೀ ಎನ್.ಪಿ. ಭಟ್ ಹಾಗೂ ಪ್ರಧಾನ ಕಾರ್ಯದರ್ಶಿ ಸಿ.ವಿ. ಗೋಪಿನಾಥ್ ಅವರು 1990ರ ಸುಮಾರಿಗೆ ಹುಟ್ಟು ಹಾಕಿದ "ಅಭಿಮತ" ಮೂರು ದಶಕಗಳಿಂದ ನಡೆದುಕೊಂಡು ಬಂದಿದೆ. ಪತ್ರಿಕೋದ್ಯಮ ಮತ್ತು ಮಾಧ್ಯಮ ಕ್ಷೇತ್ರದಲ್ಲಿ ಕಾರ್ಯ ನಿರ್ವಹಿಸುತ್ತಿದ್ದ ದೆಹಲಿ ಕರ್ನಾಟಕ ಸಂಘದ ಸದಸ್ಯರಾದ ಐ. ರಾಮಮೋಹನ ರಾವ್, ಶುಭಾ ಸಿನ್ನೂರ್ ದಾಸ್, ಡಿ.ಸಿ.ಎಸ್. ರಾವ್, ಟಿ.ಎಂ. ಶಿರೂರ್, ರಂಗಸ್ವಾಮಯ್ಯ, ಚೆನ್ನು ಎಸ್. ಮಠದ ಹಾಗೂ ಇತರರ ಸಹಕಾರದೊಂದಿಗೆ ಡಾ. ವೆಂಕಟಾಚಲ ಹೆಗಡೆ ಅವರು "ಅಭಿಮತ"ವನ್ನು 1991ರಲ್ಲಿ ನೋಂದಾಯಿತ ಗೃಹಪತ್ರಿಕೆಯಾಗಿ ಹೊರ ತಂದರು. ಆರಂಭದಲ್ಲಿ "ಅಭಿಮತ"ಎಂಟು ಪುಟಗಳಿಗೆ ಸೀಮಿತವಾಗಿತ್ತು. ಇದರಲ್ಲಿ ದೆಹಲಿ ಕರ್ನಾಟಕ ಸಂಘದ ಚಟುವಟಿಕೆಗಳ ಕುರಿತ ಸುದ್ದಿಗಳನ್ನು ಒಳಗೊಂಡಿದ್ದು, DKSನ ಎಲ್ಲಾ ಸದಸ್ಯರಿಗೆ ವಿತರಿಸಲಾಗುತ್ತಿತ್ತು. ಅಂದಿನಿಂದ ಇವತ್ತಿನವರೆಗೂ ಅಭಿಮತ ಕಾಲಕಾಲಕ್ಕೆ ರೂಪಾಂತರಗೊಳ್ಳುತ್ತ 24 ಪುಟಗಳ ಪತ್ರಿಕೆಯಾಗಿ ಇಂದು 36 ಸಂವತ್ಸರಗಳ ಪ್ರಬುದ್ಧೆಯಾಗಿ ಬೆಳೆದಿದ್ದಾಳೆ.

ಡಾ. ಟಿ.ಎಸ್. ಸತ್ಯನಾಥ್, ಸೇತು ರಾವ್, ಟೇಕಲ್ ಗೋಪಾಲಕೃಷ್ಣ, ಬಿ.ಎಸ್. ಚಂದ್ರಶೇಖರ್, ಡಾ. ಅಹಲ್ಯಾ ಚಿಂತಾಮಣಿ, ಡಾ. ಪುರುಷೋತ್ತಮ ಬಿಳಿಮಲೆ, ಉಷಾ ಭರತಾದ್ರಿ, ವಸಂತ ಶೆಟ್ಟಿ ಬೆಳ್ಳಾರೆ, ಬಾಲಕೃಷ್ಣ ನಾಯ್ಕ್ ಡಿ., ಡಾ. ಅವನೀಂದ್ರನಾಥ್ ರಾವ್, ಚಂದ್ರಶೇಖರ ಎನ್.ಪಿ., ಕೆ.ಎಸ್. ಮೂರ್ತಿ ಹೀಗೇ ಅನೇಕರು ಅಭಿಮತವನ್ನು ಬೆಳೆಸಿದ್ದಾರೆ. ಈ ಎಲ್ಲ ಮಹನೀಯರ ಕೊಡುಗೆ ಅಪಾರವಾದುದು. "ಅಭಿಮತ"ದ ಸಂಪಾದಕ ಮಂಡಳಿಯಲ್ಲಿ ನಾನೂ ಸತತ ಒಂಭತ್ತು ವರ್ಷಗಳ ಕಾಲ ಸಹಭಾಗಿಯಾಗಿದ್ದೆ.

"ಬಸವಣ್ಣನ ಸಮಾನತೆಯ ವಚನ ಪರಂಪರೆ ಮತ್ತು ಡಾ. ಅಂಬೇಡ್ಕರ್ ಅವರ ಸಾಮಾಜಿಕ ನ್ಯಾಯದ ಚಿಂತನೆ ಇವೆರಡೂ ಮಾನವ ಗೌರವವನ್ನು ಕೇಂದ್ರದಲ್ಲಿಟ್ಟ ಭಾರತೀಯ ಚಿಂತನೆಗಳಾಗಿವೆ. "ಅಭಿಮತ" ಇಂತಹ ಪ್ರಗತಿಪರ ವಿಚಾರಗಳಿಗೆ ಸಂವಾದದ ವೇದಿಕೆಯಾಗಲಿ. "ಅಭಿಮತ" ಆ ದಿಕ್ಕಿನಲ್ಲಿ ಮತ್ತಷ್ಟು ಅರ್ಥಪೂರ್ಣ ಹೆಜ್ಜೆ ಇಡಲಿ.

ದೆಹಲಿಯಲ್ಲೀಗ ಬಿರುಬಿಸಿಲು. ದೆಹಲಿ ಹಾಗೂ ದೆಹಲಿ ಸುತ್ತಮುತ್ತಲಿನ ಅರಾವಳಿ ಬೆಟ್ಟಪ್ರದೇಶ, ವನಸಿರಿಯ ಮರಗಳು, ಹೊಲಗಳ ತೇವ, ಯಮುನೆಯ ಹರಿವು ಬಿಸಿಲಿನ ಕಠಿಣತೆಯನ್ನು ತಗ್ಗಿಸುತ್ತಿದ್ದವು. ಈಗ ಅಭಿವೃದ್ಧಿಯ ಹೆಸರಲ್ಲಿ ಮಣ್ಣಿನ ಉಸಿರನ್ನೇ ಕಸಿದುಕೊಳ್ಳಲಾಗಿದೆ. ದೇಶವು ವಿಚಿತ್ರವಾದ ವಿರೋಧಾಭಾಸಗಳ ನಡುವೆ ಸಾಗುತ್ತಿದೆ. ಒಂದೆಡೆ ಯುದ್ಧದ ಪರಿಣಾಮಗಳು ಸಾಮಾನ್ಯ ಜನರನ್ನು ಸಂಕಷ್ಟಕ್ಕೊಡ್ಡಿದೆ. ಮೂರು ರಾಜ್ಯಗಳ ಚುನಾವಣಾ ಫಲಿತಾಂಶಗಳು ರಾಜಕೀಯ ಪಕ್ಷಗಳ ಗೆಲುವು–ಸೋಲಿನ ಲೆಕ್ಕಾಚಾರಗಳನ್ನು ಚರ್ಚೆಗೆ ತಂದಿವೆ. ಇದೇ ಸಮಯದಲ್ಲಿ ನೀಟ್ ಪರೀಕ್ಷೆಯ ಪೇಪರ್ ಲೀಕ್ ಪ್ರಕರಣವು ಲಕ್ಷಾಂತರ ವಿದ್ಯಾರ್ಥಿಗಳ ಭವಿಷ್ಯದ ಬಗ್ಗೆ ಗಂಭೀರ ಆತಂಕ ಹುಟ್ಟಿಸಿದೆ. ಇವೆಲ್ಲಾ ಘಟನೆಗಳು ಬೇರೆಬೇರೆ ವಿಚಾರಗಳಂತೆ ಕಂಡರೂ, ಅವುಗಳ ನಡುವೆ ಆಳವಾದ ಸಂಬಂಧವಿದೆ. ಅದು ಪ್ರಜಾಪ್ರಭುತ್ವ, ಸಾಮಾಜಿಕ ನ್ಯಾಯ ಮತ್ತು ಯುವಜನರ ಭವಿಷ್ಯದ ಪ್ರಶ್ನೆ.

ಪಂಜಾಬಿನ ಕೃಷಿಕರ ಕೊಯ್ಲಿನ ಹಬ್ಬ ಬೈಸಾಖಿ, ಸೌರಮಾನ ಹೊಸವರ್ಷದ 'ವಿಷು' ಹೊಸಬೆಳಕು, ಸಮೃದ್ಧಿ ಶುಭಾರಂಭದ ಸಂಕೇತ. ಹಾಗೆಯೇ ಹೊಸ ಆಡಳಿತ ಮಂಡಳಿ–"ಹಳೆ ಬೇರು ಹೊಸ ಚಿಗುರು, ಕೂಡಿರಲು ಮರ ಸೊಬಗು" ಎನ್ನುವಂತೆ ಭಿನ್ನ ಅಭಿಪ್ರಾಯಗಳನ್ನು ಗೌರವಿಸುವ, ಹಿರಿಯರ ಅನುಭವ ಮತ್ತು ಯುವಕರ ಹೊಸ ಚಿಂತನೆಗಳನ್ನು ಜೊತೆಯಾಗಿಸುವ, ಸಂಘವನ್ನು ಇನ್ನಷ್ಟು ಪ್ರಜಾಸತ್ತಾತ್ಮಕ ಮತ್ತು ಸಕ್ರಿಯ ವೇದಿಕೆಯಾಗಿಸುವ ದಿಕ್ಕಿನಲ್ಲಿ ಹೆಜ್ಜೆ ಇಡಲಿ ಎಂಬುದು ಎಲ್ಲ ಕನ್ನಡಿಗರ ನಿರೀಕ್ಷೆ. ಚುನಾವಣೆ ಸ್ಪರ್ಧೆಯ ಅಂತ್ಯವಾಗಿರಬಹುದು; ಆದರೆ ಸಂಘದ ಅಭಿವೃದ್ಧಿಗಾಗಿ ಎಲ್ಲರೂ ಒಂದಾಗಿ ಕೆಲಸ ಮಾಡುವ ಹೊಸ ಆರಂಭವೂ ಆಗಬೇಕು. ದೆಹಲಿ ಕರ್ನಾಟಕ ಸಂಘವು ಮುಂದಿನ ದಿನಗಳಲ್ಲಿ ಇನ್ನಷ್ಟು ಸಮನ್ವಯ ಮತ್ತು ಸೃಜನಾತ್ಮಕ ಕನ್ನಡ ವೇದಿಕೆಯಾಗಲಿ ಎಂಬ ಹಾರೈಕೆ.

ದೆಹಲಿ ಕರ್ನಾಟಕ ಸಂಘದ ಹೊಸ ಆಡಳಿತ ಮಂಡಳಿ ನನಗೆ ಸಂಪಾದಕತ್ವದ ಹೊಣೆಯನ್ನು ವಹಿಸಿರುವುದು ಗೌರವದ ಜೊತೆಗೆ ದೊಡ್ಡ ಜವಾಬ್ದಾರಿಯೂ ಹೌದು. ಕನ್ನಡ ಭಾಷೆ, ಸಾಹಿತ್ಯ ಮತ್ತು ಪ್ರಗತಿಪರ ಚಿಂತನೆಗಳ ಧ್ವನಿಯನ್ನು ಇನ್ನಷ್ಟು ಜೀವಂತವಾಗಿ ಮೂಡಿಸುವ ಪ್ರಯತ್ನ ಮಾಡುತ್ತೇವೆ. ಸಂಘದ ಎಲ್ಲ ಸದಸ್ಯರ ಸಹಕಾರದೊಂದಿಗೆ ಸಂವಾದ, ಸೃಜನಶೀಲತೆ ಮತ್ತು ಸಾಮಾಜಿಕ ಬದ್ಧತೆಯ ವೇದಿಕೆಯನ್ನು ಬಲಪಡಿಸುವ ಆಶಯವಿದೆ. ಈ ನಂಬಿಕೆಗೆ ಹೃತ್ಪೂರ್ವಕ ಕೃತಜ್ಞತೆಗಳು. ❑

*ರೇಣುಕಾ ನಿಡಗುಂದಿ*

ಕಾವಲು ಸಮಿತಿ । ಶ್ರೀ ಎನ್.ಪಿ. ಮಾಧವ । ಶ್ರೀ ಎಂ.ವಿ. ವೆಂಕಟೇಶ್ । ಶ್ರೀಮತಿ ರಾಧಾ ಕೌಜಲಗಿ

## ನಾವು-ನೀವು

ಆತ್ಮೀಯ ದೆಹಲಿ ಕನ್ನಡಿಗರಿಗೆ, ನನ್ನ ನಲ್ಮೆಯ ನಮಸ್ಕಾರಗಳು.

ಬಹಳ ದಿವಸಗಳ ನಂತರ ನನ್ನ ಮನದಾಳದ ಮಾತುಗಳನ್ನು ತಮ್ಮ ಮನಮುಟ್ಟುವಂತೆ ಹೇಳುವ ಒಂದು ಅವಕಾಶ ನನ್ನದಾಗಿದೆ. ಅದಕ್ಕಾಗಿ ತಮ್ಮೆಲ್ಲರಿಗೂ ಮತ್ತೊಮ್ಮೆ ನಮನಗಳು. ದೆಹಲಿ ಕರ್ನಾಟಕ ಸಂಘ ಇಡೀ ಭಾರತ ದೇಶದಲ್ಲೇ ಒಂದು ಅತ್ಯಂತ ಸಕ್ರಿಯವಾಗಿರುವ ಕನ್ನಡಪರ ಚಟುವಟಿಕೆಗಳ ಕೇಂದ್ರ. ಹಾಗಾಗಿ, ರಾಷ್ಟ್ರ ರಾಜಧಾನಿಯಲ್ಲಿ ಇಂತಹ ಒಂದು ಸಂಘಟನೆಯ ಕನಸು ಕಂಡಂತಹ; ಅಂತಹ ಕನಸನ್ನು ನನಸಾಗಿಸಿ, ಸಾಂಸ್ಥಿಕ ರೂಪ ಕೊಟ್ಟಂತಹ; ಸಾಂಸ್ಕೃತಿಕ ನೆಲೆಗಟ್ಟಿನ ಮೂಲಕ ಈ ಸಂಸ್ಥೆಯ ಅಸ್ತಿತ್ವವನ್ನು ಗಟ್ಟಿಗೊಳಿಸಿದಂತಹ ಹಾಗೂ ಹತ್ತು-ಹಲವು ಮನಮೋಹಕ ಕಾರ್ಯಕ್ರಮಗಳಿಂದ ಸಂಘಕ್ಕೆ-ಸಂಗೀತ, ನೃತ್ಯದ ಲೇಪನ ಹಚ್ಚಿದ ಕಲಾವಿದರು ಹಾಗೂ ಎಲ್ಲ ಕಾಲದಲ್ಲೂ-ತಮ್ಮ ಇರುವಿಕೆ ಮಾತ್ರದಿಂದಲೇ, ಕನ್ನಡತನವನ್ನು ಪ್ರೋತ್ಸಾಹಿಸಿ, ಸಂಘದ ಒಳಿತಿಗೆ ಹೆಗಲನ್ನಿತ್ತ ಸಮಸ್ತ ಕನ್ನಡಿಗರಿಗೆ ಅನಂತಾನಂತ ವಂದನೆಗಳನ್ನು ಅರ್ಪಿಸುತ್ತೇನೆ.

ಇತ್ತೀಚಿನ ಸಂಘದ ಚುನಾವಣೆಯಲ್ಲಿ ತಾವುಗಳೆಲ್ಲರೂ ಒಟ್ಟಾಗಿ ನನಗೆ ಹಾಗೂ ನೂತನ ತಂಡಕ್ಕೆ ತಮ್ಮ ಮತದಾನ, ಹಾಗೂ ಆಶೀರ್ವಾದದ ಮೂಲಕ ಮುಂದಿನ 2 ವರ್ಷಗಳಿಗೆ ದೆಹಲಿ ಕರ್ನಾಟಕ ಸಂಘದ ಸೇವೆ ಮಾಡುವ ಅವಕಾಶವನ್ನು ಕಲ್ಪಿಸಿದ್ದು, ನನಗೆ ಅದರ ಮುಂದಾಳತ್ವ ನೀಡಿ-ಪ್ರಮುಖ ಸೇವಕನನ್ನಾಗಿ ನೇಮಿಸಿದ್ದೀರಿ. ಈ 2 ವರ್ಷಗಳಲ್ಲಿ ನಾನು ಹಾಗು ನನ್ನ ತಂಡ ತಮ್ಮಗಳೆಲ್ಲರ ಆಶೋತ್ತರಗಳಿಗೆ ಪೂರಕವಾಗಿ ಸ್ಪಂದಿಸಿ, ಉತ್ತಮ ಸೇವೆ ನೀಡುತ್ತೇವೆಂಬ ಭರವಸೆಯನ್ನು ನೀಡುತ್ತೇನೆ.

ನಮ್ಮ ಹಿರಿಯರು ಕಂಡಂತ ದೆಹಲಿ ಕರ್ನಾಟಕ ಸಂಘದ ಕಲ್ಪನೆ, ತಾಯ್ನಾಡಿನಿಂದ ಸಾವಿರಾರು ಮೈಲು ದೂರದಲ್ಲಿ ನೆಲೆಸಿರುವ ಬೆರಳೆಣಿಕೆಯಷ್ಟು ಕನ್ನಡಿಗರು ಕಲೆತು, ಒಟ್ಟಾಗಿ ಕನ್ನಡ ಭಾಷೆ, ನಾಡು ನುಡಿಗಳನ್ನು ಆಚರಿಸುವುದಾಗಿತ್ತೇನೋ. ಆದರೆ, ಕಳೆದ ವರ್ಷಗಳಲ್ಲಿ ದೆಹಲಿಯಲ್ಲಿ ನೆಲೆಸಿರತಕ್ಕಂತಹ ಹಾಗೂ ಭೇಟಿ ನೀಡುವ ಕನ್ನಡಿಗರ ಸಂಖ್ಯೆ ಬಹಳ ಹೆಚ್ಚಾಗಿದೆ. ಅದೇ ರೀತಿ ಚಟುವಟಿಕೆಗಳು ಹಾಗು ಉದ್ದೇಶಗಳಲ್ಲಿಯ ಬಹಳಷ್ಟು ಬೆಳವಣಿಗೆಗಳನ್ನು ಕಂಡಿದ್ದೇವೆ. ಹಿರಿಯರ ಕಲ್ಪನೆಯ ಫಲವಾಗಿ ನಾವು ಸಂಘಕ್ಕೆ ತನ್ನದೇ ಆದ ಕಛೇರಿ, ಸಾಂಸ್ಕೃತಿಕ ಸಮುಚ್ಚಯ, ವಾಚನಾಲಯ, ಸೆಮಿನಾರ್ ಹಾಲ್ ಜೊತೆಗೆ ಇವೆಲ್ಲವುಗಳ ನಿರ್ವಹಣೆಗಾಗಿ ಹಣಕಾಸಿನ ಮೂಲವನ್ನು ಹೊಂದಿದ್ದೇವೆ. ಸಂಘ ಆರ್ಥಿಕವಾಗಿ ಸ್ವಾವಲಂಬನೆಯಾಗಿದೆ.

ಸಂಘದ ಉದ್ದೇಶಗಳ-ವ್ಯಾಖ್ಯಾನ, ಚಟುವಟಿಕೆಗಳ ವಿಸ್ತರಣೆ-ಆಡಳಿತ ಮಂಡಳಿಯ ಆಯ್ಕೆ ಪ್ರಕ್ರಿಯೆ, ಸದಸ್ಯತ್ವ ಇತ್ಯಾದಿ ವಿಚಾರಗಳಲ್ಲಿ ಬದಲಾವಣೆಗಳ ಅವಶ್ಯಕತೆ ಇದೆ. ಮುಂದಿನ ದಿನಗಳಲ್ಲಿ ಈ ಬಗ್ಗೆ ಸೂಕ್ತ ಕ್ರಮ ಕೈಗೊಂಡು ಸಂಘವನ್ನು ಮತ್ತಷ್ಟು ಕ್ರಿಯಾತ್ಮಕವಾಗಿಸಲು ಪ್ರಯತ್ನಿಸಲಾಗುತ್ತಿದೆ.

ಮುಂದಿನ ದಿನಗಳಲ್ಲಿ ನಾವು ತಮಗಿತ್ತ ಭರವಸೆಯಂತೆ ಸುಸಂಸ್ಕೃತ ವಾತಾವರಣ ಸಂಘದ ಆವರಣದಲ್ಲಿ ಮೂಡಲಿದೆ. **ಬನ್ನಿ ನಾವು ನೀವು ಎಲ್ಲರೂ ಸೇರಿ, ಕನ್ನಡದ ಕೈಂಕರ್ಯ ಮಾಡೋಣ.** ❑

**ರೇಣುಕುಮಾರ್ ಆರ್.**
ಅಧ್ಯಕ್ಷರು

## ಮುನ್ನೋಟ

ಮಾನ್ಯರೇ,

ಎರಡು ವರ್ಷದಲ್ಲಿ ಅರಿತು, ಬೆರೆತು ಕಲಿತದ್ದು ಸಾಕಷ್ಟು. ಜನಾದೇಶವೇ ಜನರ ಆಶೀರ್ವಾದ. ಪ್ರಥಮ ಬಾರಿಗೆ ನಾನು ಪ್ರಧಾನ ಕಾರ್ಯದರ್ಶಿ ಸ್ಥಾನಕ್ಕೆ ಸ್ಪರ್ಧಿಸಿ ಆಯ್ಕೆ ಮಾಡಿದ ನನ್ನ ಜನಕ್ಕೆ ನಾನು ಚಿರ ಋಣಿ. ಈ ಎರಡು ವರ್ಷದ ಅವಧಿಯಲ್ಲಿ ಸಾಕಷ್ಟು ಉತ್ತಮ ಕಾರ್ಯಕ್ರಮಗಳು, ನಿರ್ಣಯಗಳು ಮತ್ತು ಯೋಜನೆಗಳನ್ನು ಜನಪರವಾಗಿ ಮಾಡಿದ ತೃಪ್ತಿ ನನ್ನದು. ಎರಡನೆ ಬಾರಿಗೂ ನನ್ನ ಮೇಲೆ ಭರವಸೆ ಇಟ್ಟು ನಿಮ್ಮ ಆದೇಶದಂತೆ ನಾನು ಪ್ರಧಾನ ಕಾರ್ಯದರ್ಶಿಯಾಗಿ ಕಾರ್ಯಭಾರ ವಹಿಸಿಕೊಂಡು ಜನಪರವಾದ ಕಾರ್ಯಕ್ರಮ, ಯೋಜನೆ ಮತ್ತು ನಿರ್ಣಯಗಳನ್ನು ಅನುಷ್ಠಾನಗೊಳಿಸುತ್ತೇವೆ.

ನನ್ನ ಗರಿಷ್ಠ ಸಮಯವನ್ನು ಕನ್ನಡ ಸೇವೆಗಾಗಿ ಮತ್ತು ಸ್ಥಳೀಯ ಸದಸ್ಯರ ಹಿತಕ್ಕಾಗಿ ಅರ್ಪಿಸಿ ಐತಿಹಾಸಿಕವಾದ ಕಾರ್ಯಕ್ರಮಗಳನ್ನು ಮಾಡುವ ನಿಟ್ಟಿನಲ್ಲಿ ಹೆಜ್ಜೆ ಹಾಕೋಣ. ಈ ಚುನಾವಣೆಯಲ್ಲಿ ಸಾವಿರಕ್ಕೂ ಹೆಚ್ಚು ಸ್ಥಳೀಯ ಕನ್ನಡಿಗರು ಚುನಾವಣೆಯಲ್ಲಿ ಭಾಗವಹಿಸಿ ಐತಿಹಾಸಿಕ ನಿರ್ಧಾರಕ್ಕೆ ಸಾಕ್ಷಿಯಾಗಿರುವುದು ನಿಜಕ್ಕೂ ಸಂತಸದ ವಿಷಯ. ಜನಾದೇಶವನ್ನು ಶಿರಸಾ ಪಾಲಿಸಿ ನಮ್ಮ ಈ ನೂತನ ಆಡಳಿತ ಮಂಡಳಿ ಪಾರದರ್ಶಕ ಆಡಳಿತ ನಡೆಸಬೇಕೆಂಬ ಸಿದ್ಧಾಂತ ಅಳವಡಿಸಿಕೊಂಡು ಜನಪರ, ಕನ್ನಡ ಕಲೆ ಮತ್ತು ಸಾಹಿತ್ಯದ ಶ್ರೀಮಂತಿಕೆಯನ್ನು ಎತ್ತಿ ಹಿಡಿಯುವಂತ ಯೋಜನೆಗಳನ್ನು ರಾಷ್ಟ್ರ ರಾಜಧಾನಿಯಲ್ಲಿ ಮಾಡಿ ವಿಶ್ವದಾದ್ಯಂತ ಜನಮನ್ನಣೆ ಪಡೆಯುವಂತೆ ಪಣ ತೊಟ್ಟಿದ್ದೇವೆ. ನಾವು ಏನೇ ಯೋಜನೆ ಮಾಡಿದರು ಅದು ಸ್ಥಳೀಯರ ಸಹಯೋಗವಿಲ್ಲದೆ ಯಶಸ್ವಿಯಾಗಲಾರದು ಆದ್ದರಿಂದ ನಿಮ್ಮ ಸಹಕಾರ ಪ್ರತಿ ಹೆಜ್ಜೆಯಲ್ಲು ಅತಿ ಮುಖ್ಯ.

ಡಾ. ರಾಜಕುಮಾರ್ ಮಹಾನ್ ನಟರಲ್ಲದೆ ಒಬ್ಬ ಅತ್ಯುತ್ತಮ ಮಾನವತಾವಾದಿ. ಸ್ವರಾಂಜಲಿ ಇದೇ ಎಪ್ರಿಲ್ 24 ರಂದು ಅವರ ದೆಹಲಿ ಕರ್ನಾಟಕ ಸಂಘದ ಸಹಯೋಗದೊಂದಿಗೆ ಅರ್ಥಪೂರ್ಣವಾಗಿ ಆಚರಿಸಲಾಯಿತು. 1998ರಲ್ಲಿ ದೆಹಲಿಯಲ್ಲಿ ನಡೆದ ಡಾ. ರಾಜಕುಮಾರ್ ಅವರ ಕಾರ್ಯಕ್ರಮದಲ್ಲಿ ನಾನು ಸಂಚಾಲಕನಾಗಿ ಅವರನ್ನು ಪ್ರತ್ಯಕ್ಷವಾಗಿ ಕಂಡ ಭಾಗ್ಯ ನನ್ನದು. ನನ್ನ ತಂದೆ ತಾಯಿಯ ಪುಣ್ಯದ ಫಲ ಅವರ ಒಂದಷ್ಟು ಗುಣವನ್ನು ನೋಡಿ ಅಳವಡಿಕೊಂಡಿದ್ದೇನೆ.

ಇನ್ನೂ ನಾವು ಉತ್ತಮ ಕಾರ್ಯಕ್ರಮ ಮತ್ತು ಯೋಜನೆಯತ್ತ ಹೆಜ್ಜೆ ಹಾಕೋಣ.❑

ಜೈ ಕರ್ನಾಟಕ ಮಾತೆ. ಜೈ ಭುವನೇಶ್ವರಿ

**ರಾಧಾಕೃಷ್ಣ**
ಪ್ರಧಾನ ಕಾರ್ಯದರ್ಶಿ

# ಮತ್ತೊಂದು ದಿನಕ್ಕೆ ಮುಂದೂಡಲ್ಪಟ್ಟು ಎರಡು ದಿನಗಳು ನಡೆದ ವಾರ್ಷಿಕ ಮಹಾಸಭೆ




ಏಪ್ರಿಲ್ 11 ಭಾನುವಾರದಂದು ನಿಗದಿಯಾಗಿದ್ದ ಚುನಾವಣಾ ಪೂರ್ವ ವಾರ್ಷಿಕ ಮಹಾಸಭೆ ಸುಮಾರು 11 ಗಂಟೆಗೆ ಕೋರಮ್ ಆಗಿ ಪ್ರಾರಂಭವಾಯಿತು. ವೇದಿಕೆಯಲ್ಲಿ ಅಧ್ಯಕ್ಷರಾದ ಶ್ರೀ ಸಿ.ಎಂ. ನಾಗರಾಜ, ಉಪಾಧ್ಯಕ್ಷರಾದ ಶ್ರೀ ವಸಂತ ಶೆಟ್ಟಿ ಬೆಳ್ಳಾರೆ ಮತ್ತು ಶ್ರೀಮತಿ ಪೂಜಾ ರಾವ್, ಖಜಾಂಚಿ ಶ್ರೀಮತಿ ಆಶಾಲತಾ ಎಂ., ಪ್ರಧಾನ ಕಾರ್ಯದರ್ಶಿ ಶ್ರೀ ರಾಧಾಕೃಷ್ಣ, ಜಂಟಿ ಕಾರ್ಯದರ್ಶಿಗಳಾದ ಶ್ರೀ ನಾರಾಯಣ ಬಿ. ಮತ್ತು ಶ್ರೀಮತಿ ಅಶ್ವಿನಿ ಬಿ.ಎಸ್ ವೇದಿಕೆಯಲ್ಲಿ ಉಪಸ್ಥಿತರಿದ್ದರು. ಅಂದಿನ ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷರಾದ ಶ್ರೀ ಸಿ.ಎಂ. ನಾಗರಾಜ ಅವರು ನೆರೆದಿದ್ದ ದೆಹಲಿ ಕರ್ನಾಟಕ ಸಂಘದ ಆಜೀವ ಸದಸ್ಯರನ್ನು ಮತ್ತು ಕಾರ್ಯಕಾರಿ ಸಮಿತಿಯ ಎಲ್ಲಾ ಸದಸ್ಯರನ್ನು ವಾರ್ಷಿಕ ಮಹಾಸಭೆಗೆ ಸ್ವಾಗತಿಸಿದರು. ಸದಸ್ಯರಾದ ಶ್ರೀ ಶ್ರೀಹರಿ ಅವರು ಮೊದಲಿಗೆ ಮಾತನಾಡಿ ಪಾಯಿಂಟ್ ಆಫ್ ಆರ್ಡರ್ ಮುಖಾಂತರ ಸಭೆಯ ಆರಂಭಿಕ ಪ್ರಶ್ನೆಯನ್ನು ಎತ್ತಿ ಅವರೇ ಸಮಾಧಾನವನ್ನು ತಿಳಿಸುತ್ತ ಸಭೆ ಮುಂದುವರಿಯಿತು.

ಹೀಗೆ ಚರ್ಚೆಯ ಭಾಗವಾಗಿ ಆಜೀವ ಸದಸ್ಯರಾದ ಶ್ರೀ ಸಂತೋಷ್ ಎಚ್.ಎಚ್. ಅವರು ಅಧ್ಯಕ್ಷರಿಗೆ ಮಹಾಸಭೆಯನ್ನು ಕಳೆದ ಬಾರಿ ನಿಸ್ತಂತು ಪ್ರಸಾರದ ಮೂಲಕ ಸಭೆಗೆ ಬರಲಾಗದ ಎಲ್ಲಾ ಆಜೀವ ಸದಸ್ಯರು ಪಾಲ್ಗೊಳ್ಳಲು ಅವಕಾಶ ಮಾಡಿಕೊಡಲಾಗಿತ್ತು ಈ ಬಾರಿಯೂ ಈ ಅವಕಾಶವನ್ನು ಮಾಡಿಕೊಡಬೇಕೆಂದು ವಿನಂತಿಸಿದರು. ಇದನ್ನು ಅನುಮೋದಿಸಿದ ಆಜೀವ ಸದಸ್ಯ ಶ್ರೀ ಪ್ರಕಾಶ್ ಉಳೆಪಾಡಿ ಕೂಡ ಈ ವಿನಂತಿಗೆ ಒತ್ತಾಯಿಸಲಾಗಿ ಅಧ್ಯಕ್ಷರಾದ ಶ್ರೀ ಸಿ.ಎಂ. ನಾಗರಾಜ ಅವರು ಇದರ ಬಗ್ಗೆ ವಾರ್ಷಿಕ ಸಭೆಯ ನೋಟಿಸ್‌ನಲ್ಲಿ ಉಲ್ಲೇಖಿಸಲಾಗಿಲ್ಲ, ಆದ್ದರಿಂದ ನಿಸ್ತಂತು ಪ್ರಸಾರ ಮಾಡಲು ವ್ಯವಸ್ಥೆ ಮಾಡಲಾಗಿಲ್ಲ ಎಂದು ತಿಳಿಸಿದರು. ಈ ಒಂದು ಪ್ರಸ್ತಾಪ ಗೊಂದಲಮಯವಾಗಿ ಸಭೆಯು ಸ್ಥಗಿತಗೊಂಡು ಮುಂದೂಡಲಾಯಿತು.

ಚುನಾವಣಾ ಪ್ರಕ್ರಿಯೆಯನ್ನು ಚುನಾವಣಾ ಅಧಿಕಾರಿಯಾದ ಶ್ರೀ ಈಶ್ವರ ಮಡಿವಾಳ ಅವರು ಮುಂದುವರಿಸಿದರು. ದಿನಾಂಕ 12.04.2026 ರಂದು ನಡೆಯುವ ಚುನಾವಣಾ ಪ್ರಕ್ರಿಯೆ ಕುರಿತು ಸ್ಥೂಲವಾಗಿ ವಿವರಿಸಿದರು. ನಂತರ ಚುನಾವಣೆಯಲ್ಲಿ ಭಾಗವಹಿಸಿದ ಎಲ್ಲಾ ಸ್ಪರ್ಧಾಳುಗಳನ್ನು ತಮ್ಮ ಸ್ವಂತ ಪರಿಚಯ ಸಭೆಗೆ ನೀಡಿ ಮತ ನೀಡುವಂತೆ ಕೋರಿದರು.

ಚುನಾವಣೆ ನಂತರ ನೂತನ ಸಮಿತಿಯು ಆಡಳಿತ ವಹಿಸಿಕೊಂಡು ಏಪ್ರಿಲ್ 19 ರಂದು ಮುಂದೂಡಲ್ಪಟ್ಟ ಮಹಾಸಭೆ ಬೆಳಿಗ್ಗೆ 10:30ರ ನಂತರ ಕೋರಮ್ ಆಗಿ ಆರಂಭವಾಯಿತು. ವೇದಿಕೆಯಲ್ಲಿ ನೂತನ ಅಧ್ಯಕ್ಷರಾದ ಶ್ರೀ ರೇಣುಕುಮಾರ್ ಆರ್., ಸಭಾಧ್ಯಕ್ಷರಾಗಿ ಕುಳಿತರೆ ಅವರೊಂದಿಗೆ ಎರಡನೇ ಬಾರಿ ಉಪಾಧ್ಯಕ್ಷರಾಗಿ ಆಯ್ಕೆಯಾದ ಶ್ರೀ ವಸಂತ ಶೆಟ್ಟಿ ಬೆಳ್ಳಾರೆ, ಪ್ರಥಮ ಬಾರಿಗೆ ಉಪಾಧ್ಯಕ್ಷರಾಗಿ ಆಯ್ಕೆಯಾದ ಶ್ರೀಮತಿ ಶೋಭಾ ಗೌಡ, ಖಜಾಂಚಿಯಾಗಿ ಮತ್ತೊಮ್ಮೆ ಆಯ್ಕೆಯಾದ ಶ್ರೀಮತಿ ಆಶಾಲತಾ ಎಂ., ಎರಡನೇ ಬಾರಿ ಪ್ರಧಾನ ಕಾರ್ಯದರ್ಶಿಗಳಾಗಿ ಆಯ್ಕೆಯಾದ ಶ್ರೀ ರಾಧಾಕೃಷ್ಣ ಮತ್ತು ಜಂಟಿ ಕಾರ್ಯದರ್ಶಿಗಳಾಗಿ ಎರಡನೇ ಬಾರಿ ಆಯ್ಕೆಯಾದ ಶ್ರೀಮತಿ ಅಶ್ವಿನಿ ಬಿ.ಎಸ್. ಮತ್ತು ಪ್ರಥಮ ಬಾರಿ ಆಯ್ಕೆಯಾದ ಸಂತೋಷ ಜೆ ವೇದಿಕೆಯಲ್ಲಿದ್ದರು.

ನೂತನ ಅಧ್ಯಕ್ಷರಾದ ಶ್ರೀ ರೇಣುಕುಮಾರ್ ಅವರು ನೆರೆದ ಎಲ್ಲಾ ಆಜೀವ ಸದಸ್ಯರನ್ನು ಮತ್ತು ನಿಸ್ತಂತು ಮೂಲಕ ಉಪಸ್ಥಿತರಿದ್ದ ಸದಸ್ಯರನ್ನು ಸ್ವಾಗತಿಸುತ್ತ ಚುನಾವಣೆ ಮೂಲಕ ತಾವು ಆಯ್ಕೆಯಾಗಿದ್ದಕ್ಕಾಗಿ ಎಲ್ಲರಿಗೂ ತಮ್ಮ ಹೃದಯ ಪೂರ್ವಕ ಧನ್ಯವಾದಗಳನ್ನು ತಿಳಿಸಿದರು. ಮಹಾಸಭೆಯು ಸುಮಾರು 3–4 ತಾಸುಗಳು ಬಹಳ ಸುಗಮವಾಗಿ, ಸಮರ್ಪಕವಾಗಿ ಮತ್ತು ಸಾರ್ಥಕವಾಗಿ ಅಂತ್ಯ ಕಂಡಿತು.

ನಿಸ್ತಂತು ಮೂಲಕ ಭಾಗವಹಿಸಿದ ಗುರುಗಾಂವ್ ಕನ್ನಡ ಸಂಘದ ಶ್ರೀ ಮರಿಬಸಪ್ಪ ಗುರುಗಾಂವ್ ಕನ್ನಡ ಸಂಘಕ್ಕೆ ಒಂದಕ್ಕಿಂತ ಹೆಚ್ಚು ಕಾರ್ಯಕ್ರಮಕ್ಕೆ ಸಹಯೋಗ ನೀಡಬೇಕು ಎಂದು ಮನವಿ ಮಾಡಿದರು. ಹಿರಿಯರಾದ ಶ್ರೀ ಚೆನ್ನು ಎಸ್. ಮಠದ, ಶ್ರೀ ಆನಂದ ಮೂರ್ತಿ ಮತ್ತು ಇನ್ನೂ ಅನೇಕರು ನಿಸ್ತಂತು ಮುಖೇನಾ ವಾರ್ಷಿಕ ಸಭೆಯಲ್ಲಿ ಚರ್ಚಿಸಿದರು.

ಈ ಸಭೆಯಲ್ಲಿ ನೇರ ಉಪಸ್ಥಿತರಿದ್ದ ಸಂಘದ ಕಾವಲು ಸಮಿತಿ ಸದಸ್ಯರಾದ ಶ್ರೀ ಎನ್.ಎ. ಮಾಧವ, ಮಾಜಿ ಪ್ರಧಾನ ಕಾರ್ಯದರ್ಶಿ ಶ್ರೀ ಎಸ್. ಕೃಷ್ಣ ಭಟ್, ಮಾಜಿ ಖಜಾಂಚಿಗಳಾದ ಶ್ರೀ ಈಶ್ವರ ಮಡಿವಾಳ, ಶ್ರೀ ಕೆ.ಆರ್. ರಾಮಮೂರ್ತಿ, ಹಿರಿಯ ದೆಹಲಿ ಕನ್ನಡಿಗರು ಹಾಗೂ ಆಜೀವ ಸದಸ್ಯರು ಭಾಗವಹಿಸಿ ಅನೇಕ ವಿಷಯಗಳನ್ನು ಚರ್ಚಿಸಿದರು, ಸುಧಾರಣೆಗಳಿಗೆ ಸಲಹೆ ನೀಡಿದರು ಮತ್ತು ನಿಸ್ತಂತು ಮುಖೇನ ಸೇರಿದ್ದವರ ವಿನಂತಿಯ ಮೂಲಕ ಎಲ್ಲರ ಪ್ರಶ್ನೋತ್ತರಗಳಿಗೆ ಅಧ್ಯಕ್ಷ ಶ್ರೀ ರೇಣುಕುಮಾರ್ ಆರ್. ಅವರು ಸಮಾನ ಅವಕಾಶ ಮತ್ತು ಸಮಯ ನೀಡಿ ಸಮಧಾನಕರವಾಗಿ ವಿಷಯಗಳನ್ನು ಮಂಡಿಸಿ ಉತ್ತರ ಪಡೆಯುವಲ್ಲಿ ಮುಂದುವರಿದ ವಾರ್ಷಿಕ ಮಹಾಸಭೆ ಯಶಸ್ವಿಯಾಗಿ ಅಂತ್ಯಗೊಂಡಿತು. ❑



# ನೂತನ ಕಾರ್ಯಕಾರಿ ಸಮಿತಿ–2026–28



**ಅಧ್ಯಕ್ಷರು–ಶ್ರೀ ರೇಣುಕುಮಾರ್.ಆರ್. :** ಕಳೆದ ಎರಡೂವರೆ ದಶಕಗಳಿಂದ ಕರ್ನಾಟಕ ಸರ್ಕಾರದ ನಿವಾಸಿ ಆಯುಕ್ತರ ಕಚೇರಿಯಲ್ಲಿ ಸೇವೆ ಸಲ್ಲಿಸುತ್ತಿರುವ ಇವರು ಪ್ರಸ್ತುತ ಉಪ ಸಮನ್ವಯಾಧಿಕಾರಿಯಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಹಿಂದೆ ಭಾರತ ಸರ್ಕಾರದ ರೈಲ್ವೇ ಮತ್ತು ಕಾರ್ಮಿಕ ಕಲ್ಯಾಣ ಕೇಂದ್ರ ಮಂತ್ರಿಗಳಿಗೆ ಸಹಾಯಕ ಆಪ್ತ ಕಾರ್ಯದರ್ಶಿಯಾಗಿ ಕಾರ್ಯ ನಿರ್ವಹಿಸಿದ್ದು, ದೆಹಲಿ ಕನ್ನಡ ಶಿಕ್ಷಣ ಸಂಸ್ಥೆ ಮತ್ತು ದೆಹಲಿ ಕರ್ನಾಟಕ ಸಂಘದಲ್ಲಿ ಪ್ರಧಾನ ಕಾರ್ಯದರ್ಶಿಯಾಗಿ ಅತ್ಯುತ್ತಮ ಸೇವೆ ಸಲ್ಲಿಸಿದ್ದಾರೆ. ಇವರು ಮೊದಲ ಬಾರಿಗೆ ಸಂಘದ ಕಾರ್ಯದರ್ಶಿಯಾಗಿದ್ದ ಅವಧಿಯಲ್ಲಿ ಆಯೋಜಿಸಲಾಗಿದ್ದ ಬೃಹತ್ 'ದೆಹಲಿ ಉತ್ಸವ' ಸ್ಮರಣೀಯ ದಾಖಲೆಯಾಗಿದೆ. ದೆಹಲಿಯ ಕರ್ನಾಟಕ ಭವನದ ಎಂಪ್ಲಾಯಿಸ್ ಹೌಸ್ ಬಿಲ್ಡಿಂಗ್ ಕೋ–ಅಪ್ ಸೊಸೈಟಿಯ ಹಾಲಿ ಅಧ್ಯಕ್ಷರಾಗಿಯೂ ಇವರ ಕೊಡುಗೆ ಅಪಾರ. ಕನ್ನಡ ಭಾಷೆ ಮತ್ತು ಸಾಹಿತ್ಯದ ಬಗ್ಗೆ ಒಲವು ಹೊಂದಿರುವ ಇವರು ಕನ್ನಡ ಮತ್ತು ಕನ್ನಡಿಗರ ಸಮಸ್ಯೆಗಳಿಗೆ ತಕ್ಷಣ ಸ್ಪಂದಿಸುವ ಜನಾನುರಾಗಿಯಾಗಿದ್ದಾರೆ. ಮುಂಚೆ ದೆಹಲಿ ಕರ್ನಾಟಕ ಸಂಘದ ಪ್ರಧಾನ ಕಾರ್ಯದರ್ಶಿಯಾಗಿ ಸೇವೆ ಸಲ್ಲಿಸಿರುತ್ತಾರೆ. ಶ್ರೀಯುತರು ಉತ್ತಮ ವಾಗ್ಮಿಗಳು ಅಲ್ಲದೆ ಹಲವಾರು ಸಂಘ ಸಂಸ್ಥೆಗಳ ಜೊತೆಗೆ ನಿರಂತರ ಸಂಪರ್ಕ ಹೊಂದಿದ್ದಾರೆ. ಅಲ್ಲದೆ ಕರ್ನಾಟಕ ಭವನದ ಸಂಪರ್ಕ ಸೇವಾಧಿಕಾರಿಯಾಗಿ ಕೆಲಸ ನಿರ್ವಹಿಸಿದ್ದಾರೆ. ದೇಶದ ಹಾಗು ರಾಜ್ಯದ ಹಲವಾರು ಮಂತ್ರಿಗಳು ಮತ್ತು ರಾಜಕಾರಣಿಗಳಿಗೆ ಚಿರಪರಿಚಿತರು.



**ಉಪಾಧ್ಯಕ್ಷರು–ಶ್ರೀ ವಸಂತ ಶೆಟ್ಟಿ ಬೆಳ್ಳಾರೆ :** ಸುಮಾರು ನಾಲ್ಕು ದಶಕಗಳಿಂದ, ದೆಹಲಿಯಲ್ಲಿ ಅತ್ಯುತ್ತಮ ಸಂಘಟಕರಂದೇ ಜನಪ್ರಿಯರಾದ ಇವರು, ದೆಹಲಿ ಕರ್ನಾಟಕ ಸಂಘದ ಸಾಂಸ್ಕೃತಿಕ ಸಮಿತಿಯ ಮುಖ್ಯಸ್ಥರಾಗಿ, ಜಂಟಿ ಕಾರ್ಯದರ್ಶಿಯಾಗಿ, ಉಪಾಧ್ಯಕ್ಷರಾಗಿ ಹಾಗೂ ಎರಡು ಅವಧಿಗಳಲ್ಲಿ ಅಧ್ಯಕ್ಷರಾಗಿ ಅವರು ತಮ್ಮ ಸಂಘಟನೆ ಮತ್ತು ದಕ್ಷ ಆಡಳಿತದ ಪರಿಚಯ ಮಾಡಿಕೊಟ್ಟಿದ್ದಾರೆ ಹಾಗೂ ದೆಹಲಿ ಕನ್ನಡ ಶಿಕ್ಷಣ ಸಂಸ್ಥೆಯ ಒಂದು ಬಾರಿ ಉಪಾಧ್ಯಕ್ಷರಾಗಿ ನಂತರ ಅಧ್ಯಕ್ಷರಾಗಿಯೂ ಉತ್ತಮ ಆಡಳಿತ ನೀಡಿದ್ದಾರೆ. ಸಾಂಸ್ಕೃತಿಕ ವಲಯದಲ್ಲಿ ಹೊಸ ಪ್ರತಿಭೆಗಳಿಗೆ ಅವಕಾಶ, ವಿನೂತನ ಕಾರ್ಯಕ್ರಮಗಳನ್ನು ಆಯೋಜಿಸುವ ಮೂಲಕ ಕರ್ನಾಟಕದ ಸಾಂಸ್ಕೃತಿಕ ವಲಯದಲ್ಲಿ ಅತ್ಯಂತ ಜನಪ್ರಿಯರಾಗಿದ್ದಾರೆ. ಮೋತೀಬಾಗ್‌ನ ಮೆಟ್ರೋ ಸ್ಟೇಶನ್‌ಗೆ ಸರ್. ಎಂ. ವಿಶ್ವೇಶ್ವರಯ್ಯನವರ ಹೆಸರು, ಕರ್ನಾಟಕ ರಾಜ್ಯ ಸರ್ಕಾರ ಹಾಗೂ ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅನುದಾನದೊಂದಿಗೆ ಜೆ.ಎನ್.ಯು.ವಿನಲ್ಲಿ ಕನ್ನಡ ಅಧ್ಯಯನ ಪೀಠ ಸ್ಥಾಪನೆಗೆ, ಪ್ರಥಮ ಸ್ವಾತಂತ್ರ್ಯ ಹೋರಾಟಗಾರ್ತಿ ರಾಣಿ ಅಬ್ಬಕ್ಕನ ಕುರಿತಾದ ರಾಷ್ಟ್ರೀಯ ಉತ್ಸವ, ಬೃಹತ್ ತುಳುಸಿರಿ ಕಾರ್ಯಕ್ರಮ ಇವೆಲ್ಲ ದೂರದೃಷ್ಟಿಯ ಮತ್ತು ನೆನಪಿನಾಳದಲ್ಲಿ ಉಳಿಯುವ ಕಾರ್ಯಕ್ರಮಗಳಿಗೆ ಸಾಕ್ಷಿ. ಯಕ್ಷಧ್ರುವ ಪಟ್ಲ ಫೌಂಡೇಶನ್ ದೆಹಲಿ ಘಟಕದ ಅಧ್ಯಕ್ಷರು, ತುಳು ಭಾಷೆಯನ್ನು ಸಂವಿಧಾನದ 8ನೇ ಪರಿಚ್ಛೇದಕ್ಕೆ ಸೇರಿಸುವಂತೆ ನಿರಂತರವಾಗಿ ಹೋರಾಡುತ್ತಲೇ ಬಂದಿದ್ದಾರೆ. ಕರ್ನಾಟಕ ತುಳು ಅಕಾಡೆಮಿಯ ಸದಸ್ಯರಾಗಿಯೂ ದುಡಿದ ಅನುಭವ ಇದೆ. ಪ್ರಸ್ತುತ ಸಂಘದ ಉಪಾಧ್ಯಕ್ಷರಾಗಿ ಎರಡನೇ ಬಾರಿಗೆ ಚುನಾಯಿತರಾಗಿದ್ದಾರೆ ಮತ್ತು ದೆಹಲಿ ಕನ್ನಡ ಶಿಕ್ಷಣ ಸಂಸ್ಥೆಯ ಆಡಳಿತ ಮಂಡಳಿಯ ಸದಸ್ಯರಾಗಿ ಸೇವೆ ಸಲ್ಲಿಸುತ್ತಿದ್ದಾರೆ.



**ಉಪಾಧ್ಯಕ್ಷರು–ಶ್ರೀಮತಿ ಶೋಭಾ ಗೌಡ :** ಮೂಲತಃ ಹಾಸನ ಜಿಲ್ಲೆಯವರಾದ ಇವರು ದೆಹಲಿ ಪೋಲಿಸ್‌ನಲ್ಲಿ ಸುಮಾರು 32 ವರ್ಷಗಳಿಂದ ಸೇವೆ ಸಲ್ಲಿಸುತ್ತಿರುವ ಹಾಗೂ ದೆಹಲಿ ಕನ್ನಡ ಶಿಕ್ಷಣ ಸಂಸ್ಥೆಯ ಮಾಜಿ ಖಜಾಂಚಿಗಳಾದ ಶ್ರೀ ಹನುಮೇ ಗೌಡರವರ ಧರ್ಮಪತ್ನಿ, ಇವರು ಪ್ರಾಥಮಿಕ ಶಾಲಾ ಶಿಕ್ಷಕಿಯಾಗಿ ಸೇವೆ ಸಲ್ಲಿಸಿರುತ್ತಾರೆ. ಪ್ರಸ್ತುತ ದೆಹಲಿಯಲ್ಲಿ ಸುಮಾರು ಮಕ್ಕಳಿಗೆ ಟ್ಯೂಷನ್ ಹೇಳಿ ಕೊಡುತ್ತಿದ್ದಾರೆ. ದೆಹಲಿ ಕರ್ನಾಟಕ ಸಂಘದ ಕಾರ್ಯಕಾರಿ ಸಮಿತಿಯಲ್ಲಿ ಸದಸ್ಯೆಯಾಗಿ ಚುನಾಯಿತರಾಗಿ ಸಾಂಸ್ಕೃತಿಕ ವಲಯದಲ್ಲಿ ಸೇವೆ ಸಲ್ಲಿಸಿರುತ್ತಾರೆ. ಎರಡು ಬಾರಿ ಸ್ನೇಹಾ ದೆಹಲಿ ಕನ್ನಡ ಲೇಡಿಸ್ ಅಸೋಸಿಯೇಷನ್‌ನಲ್ಲಿ ಜಂಟಿ ಕಾರ್ಯದರ್ಶಿಯಾಗಿ ಸೇವೆ ಸಲ್ಲಿಸಿದ ಅನುಭವ ಹೊಂದಿದ್ದಾರೆ. ಪ್ರಸ್ತುತ ಸ್ನೇಹಾ ದೆಹಲಿ ಕನ್ನಡ ಲೇಡೀಸ್ ಅಸೋಸಿಯೇಷನ್‌ನಲ್ಲಿ ಪ್ರಧಾನ ಕಾರ್ಯದರ್ಶಿಯಾಗಿ ಸೇವೆ ಸಲ್ಲಿಸುತ್ತಿದ್ದಾರೆ. ದೆಹಲಿ ಪೋಲಿಸ್ ಕನ್ನಡಿಗರ ಕಲ್ಯಾಣ ಸಮಿತಿ ಹಾಗೂ ದೆಹಲಿ ಒಕ್ಕಲಿಗ ಗೌಡ ಸಂಘದಲ್ಲಿ ಸಾಂಸ್ಕೃತಿಕ ವಲಯದಲ್ಲಿ ಗುರುತಿಸಿಕೊಂಡಿರುತ್ತಾರೆ.



**ಪ್ರಧಾನ ಕಾರ್ಯದರ್ಶಿ–ಶ್ರೀ ರಾಧಾಕೃಷ್ಣ :** ಕಳೆದ 35 ವರ್ಷಗಳಿಂದ ದೆಹಲಿಯಲ್ಲಿ ನೆಲೆಸಿರುವ ಇವರು ಕರ್ನಾಟಕ ಭವನದಲ್ಲಿ ಕಾರ್ಯ ನಿರ್ವಹಿಸಿ ನಿವೃತ್ತರಾಗಿರುತ್ತಾರೆ. ಸದಾ ಹಸನ್ಮುಖಿಯಾದ ಇವರು ಮೂಲತಃ ಉಡುಪಿ ಜಿಲ್ಲೆಯ ಪ್ರಖ್ಯಾತ ಕುಂದರಾಜ ವರ್ಮ ಆಳಿದ ಕುಂದಾಪುರ ತಾಲ್ಲೂಕಿನ ಪಂಚಗಂಗಾ ನದಿ ತಟದ ಕೋಡಿ ಗ್ರಾಮದವರು. ಇವರು ದೆಹಲಿ ಮತ್ತು ಎನ್.ಸಿ.ಆರ್.ನ ಕನ್ನಡಿಗರಲ್ಲಿ ಅನ್ನದಾತರೆಂದೇ ಜನಮನ್ನಣೆ ಗಳಿಸಿದ್ದಾರೆ. ಪ್ರಸ್ತುತ ಇವರು ದೆಹಲಿಯಲ್ಲಿ 1996 ರಿಂದ ಚಾಲ್ತಿಯಲ್ಲಿರುವ ತಮ್ಮದೇ ಆದ ಉಡುಪಿ ಎಂಟರ್‌ಪ್ರೈಸಸ್‌ನ ಮ್ಯಾನೇಜಿಂಗ್ ಡೈರೆಕ್ಟರ್ ಆಗಿರುತ್ತಾರೆ. ಹಲವು ಬಾರಿ ಕಾರ್ಯಕಾರಿ ಸಮಿತಿಯ ಸದಸ್ಯರಾಗಿ, ದೆಹಲಿ ಕನ್ನಡ ಶಿಕ್ಷಣ ಸಂಸ್ಥೆಯ ಆಡಳಿತ ಮಂಡಳಿಯ ಸದಸ್ಯರಾಗಿ ಸಂಘದ ಜಂಟಿ ಕಾರ್ಯದರ್ಶಿಯಾಗಿ ಸೇವೆ ಸಲ್ಲಿಸಿದ್ದಾರೆ. ಪ್ರಸ್ತುತ ಇವರು ದೆಹಲಿ ಕರ್ನಾಟಕ ಸಂಘದ ಪ್ರಧಾನ ಕಾರ್ಯದರ್ಶಿಯಾಗಿ ಎರಡನೇ ಬಾರಿಗೆ ಚುನಾಯಿತರಾಗಿದ್ದಾರೆ.



**ಖಜಾಂಚಿ–ಶ್ರೀಮತಿ ಆಶಾಲತಾ ಎಂ. :** ಉದ್ಯೋಗ: ದೆಹಲಿ ಮೆಟ್ರೋದಲ್ಲಿ ಸೀನಿಯರ್ ರೆವೆನ್ಯೂ ಸೂಪರ್‌ವೈಸರ್. ಶಿಕ್ಷಣ : ಸಾಹಿತ್ಯದಲ್ಲಿ ಪದವಿ ಮತ್ತು ಇಲೆಕ್ಟ್ರಿಕಲ್ ಇಂಜಿನಿಯರಿಂಗ್‌ನಲ್ಲಿ ಡಿಪ್ಲೋಮಾ. ಹುಟ್ಟಿದ ಊರು : ಬೆಂಗಳೂರು. ಮೂಲತಃ ಮಂಡ್ಯ ಜಿಲ್ಲೆ. ಸಾಧನೆ : ದೆಹಲಿ ಮೆಟ್ರೋದಲ್ಲಿ ಪೈಲೆಟ್ ಆಗಿ ಕೆಲಸ ಮಾಡಿದ ಮೊದಲ ಮತ್ತು ಏಕೈಕ ಕನ್ನಡತಿ. ಕರ್ನಾಟಕದ ದೆಹಲಿ ಮೆಟ್ರೋ ರೈಲ್ವೇಯ ಅತ್ಯುನ್ನತ ಪ್ರಶಸ್ತಿಯಾದ "ಮ್ಯಾನೇಜಿಂಗ್ ಡೈರೆಕ್ಟರ್ ಅವಾರ್ಡ್" 2019ನೇ ಸಾಲಿಗೆ ಮಾನ್ಯ ಉಪ ರಾಷ್ಟ್ರಪತಿ ಶ್ರೀ ವೆಂಕಯ್ಯ ನಾಯ್ಡು ಅವರಿಂದ ಪಡೆದಿರುತ್ತಾರೆ. ಶಾಲೆಯ ದಿನಗಳಲ್ಲಿ ಸ್ಕೌಟ್ಸ್ ಮತ್ತು ಗೈಡ್ಸ್‌ನಲ್ಲಿ ರಾಜ್ಯ ಪ್ರಶಸ್ತಿ ಪಡೆದಿರುತ್ತಾರೆ. ಕ್ರೀಡೆ ಮತ್ತು ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ಅತ್ಯಂತ ಆಸಕ್ತಿಯಿದ್ದು ಸಂಘದ ಏಕಾಂಕ ನಾಟಕ ಸ್ಪರ್ಧೆಯಲ್ಲಿ 'ಅತ್ತೆಗೆ ಲತ್ತೆ' ನಾಟಕದಲ್ಲಿ 'ಬೇಬಿ'ಯ ಪಾತ್ರಕ್ಕೆ ತೀರ್ಪುಗಾರರ ವಿಶೇಷ ಬಹುಮಾನ ಬಂದಿದೆ. ದೆಹಲಿ ಕರ್ನಾಟಕ ಸಂಘ ಆಯೋಜಿಸಿದ ನೃತ್ಯ ಸಿಂಚನ, ನೃತ್ಯ ವೈಭವ ಮುಂತಾದ ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ದೆಹಲಿ ಸುಮಾರು 150ಕ್ಕೂ ಹೆಚ್ಚು ಸ್ಥಳೀಯ ಕಲಾವಿದರನ್ನು ಒಟ್ಟುಗೂಡಿಸಿ ಅತ್ಯುತ್ತಮ ಸಾಂಸ್ಕೃತಿಕ ಕಾರ್ಯಕ್ರಮವನ್ನು ಆಯೋಜಿಸಿದ ಅನುಭವವಿದೆ. ದೆಹಲಿ ಪೋಲಿಸ್ ಕಲ್ಯಾಣ ಸಮಿತಿ ಆಯೋಜಿಸಿದ ಕಾರ್ಯಕ್ರಮಗಳಲ್ಲಿ ದೆಹಲಿ ಪೋಲಿಸ್‌ನ ಸದಸ್ಯರು ಹಾಗೂ ಮಕ್ಕಳನ್ನು ಒಟ್ಟುಗೂಡಿಸಿ ಉತ್ತಮ ಕಾರ್ಯಕ್ರಮವನ್ನು ಸಂಯೋಜಿಸಿದ್ದಾರೆ. ಸಾಹಿತ್ಯಾಸಕ್ತಿಯಿಂದ ದೆಹಲಿ ಕರ್ನಾಟಕ ಸಂಘದ ನೂತನ ಗ್ರಂಥಾಲಯವನ್ನು ಸುಸಜ್ಜಿತಗೊಳಿಸಲು ಸಹಕರಿಸಿರುತ್ತಾರೆ. ದೆಹಲಿ ಕರ್ನಾಟಕ ಸಂಘದ ಕಾರ್ಯಕಾರಿ ಸಮಿತಿಯಲ್ಲಿ 2013 ರಿಂದ 2019ರ ಅವಧಿಯಲ್ಲಿ ಎರಡು ಬಾರಿ ಉಪಾಧ್ಯಕ್ಷ ಸ್ಥಾನದಲ್ಲಿ ಕೆಲಸ ಮಾಡಿದ ಅನುಭವ ಹೊಂದಿರುತ್ತಾರೆ. 2019ರ ದೆಹಲಿ ಕರ್ನಾಟಕ ಸಂಘದ ಚುನಾವಣೆಯಲ್ಲಿ ಮೊದಲ ಬಾರಿಗೆ ಒಬ್ಬ ಮಹಿಳೆ ಸ್ವತಂತ್ರ ಅಭ್ಯರ್ಥಿಯಾಗಿ ಖಜಾಂಚಿ ಸ್ಥಾನಕ್ಕೆ ಸ್ಪರ್ಧಿಸಿ ಚುನಾಯಿತರಾಗಿರುತ್ತಾರೆ. ಪ್ರಸ್ತುತ ಸಂಘದ ಖಜಾಂಚಿಯಾಗಿ ಸೇವೆ ಸಲ್ಲಿಸುತ್ತಿದ್ದಾರೆ.



**ಜಂಟಿ ಕಾರ್ಯದರ್ಶಿ–ಶ್ರೀ ಸಂತೋಷ ಜೆ. :** ಮೂಲತಃ ಕೃಷಿ ಕುಟುಂಬದಲ್ಲಿ ಜನಿಸಿದ ಇವರು ಹಾಸನ ಜಿಲ್ಲೆಯವರು. ಸುಮಾರು 22 ವರ್ಷಗಳಿಂದ ಗುರುಗ್ರಾಮದಲ್ಲಿರುವ ಹೋಂಡಾ ಕಂಪೆನಿಯಲ್ಲಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಗುರುಗಾಂವ್ ಕನ್ನಡ ಸಂಘದಲ್ಲಿ ನೃತ್ಯ, ನಾಟಕ, ಕ್ರೀಡೆ ಹಾಗೂ ಸಂಘದ ಸಂಘಟನೆಯಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡು ಅಲ್ಲಿನ ಗುರುಗಾಂವ್ ಕನ್ನಡ ಸಂಘದ ಪ್ರಧಾನ ಕಾರ್ಯದರ್ಶಿಯಾಗಿ ಕಾರ್ಯ ನಿರ್ವಹಿಸಿದ ಅನುಭವ ಹೊಂದಿದ್ದಾರೆ. ದೆಹಲಿ ಕರ್ನಾಟಕ ಸಂಘದ 3 ಅವಧಿಯ 7 ವರ್ಷಗಳ ಕಾಲ ಕಾರ್ಯಕಾರಿ ಸಮಿತಿಯ ಸದಸ್ಯರಾಗಿ ತುಂಬಾ ಉತ್ಸಾಹದಿಂದ ಸಮಯ ನೀಡಿ ಕಾರ್ಯ ನಿರ್ವಹಿಸಿರುವ ಇವರು ಕ್ರೀಡಾ ಸಮಿತಿಯ ಸಂಚಾಲಕರಾಗಿ ಕೊರೊನಾ ಸಂದರ್ಭದಲ್ಲಿ ಶಿಸ್ತುಬದ್ಧವಾಗಿ ಆಯೋಜಿಸಿದ್ದರು. ದೆಹಲಿ ಕರ್ನಾಟಕ ಸಂಘದಲ್ಲಿ ಮೊದಲ ಬಾರಿಗೆ 21 ಕ್ರಿಕೆಟ್ ತಂಡಗಳು ಭಾಗವಹಿಸಿದ್ದ ಪಂದ್ಯಾವಳಿಯನ್ನು ಹಾಗೂ ವಾಲಿಬಾಲ್, ಕಬಡ್ಡಿ ಮತ್ತು ಥ್ರೋಬಾಲ್ ಹಾಗೂ ಇತರ ಆಟೋಟ ಸ್ಪರ್ಧೆಗಳನ್ನು ತುಂಬಾ ಅಚ್ಚುಕಟ್ಟಾ ಆಯೋಜಿಸುವ ಮೂಲಕ ಕಾರ್ಯ ನಿರ್ವಹಿಸಿದ್ದಾರೆ. ಸಂಘದ ಅಮೃತ ಮಹೋತ್ಸವ ಸ್ಮರಣ ಸಂಚಿಕೆ, ಪಿಕ್‌ನಿಕ್ ಸಮಿತಿ ಮತ್ತು ಕ್ರೀಡಾ ಸಮಿತಿಯ ಸಂಚಾಲಕರಾಗಿ ಅತ್ಯುತ್ತಮ ಕಾರ್ಯ ನಿರ್ವಹಿಸಿದ್ದಾರೆ. ದೆಹಲಿ ಎನ್‌ಸಿಆರ್‌ನ ಎಲ್ಲಾ ಸ್ಥಳೀಯ ಸಂಘ–ಸಂಸ್ಥೆಗಳನ್ನು ಒಂದು ವೇದಿಕೆಗೆ ತಂದು ಕಾರ್ಯಕ್ರಮ ಮಾಡಿರುತ್ತಾರೆ ಹಾಗೂ ಸಂಸ್ಥೆಯ ಕಲಾವಿದರಿಗೆ ಜಾನಪದ ಕಲೆಗಳು ಯಕ್ಷಗಾನ ಮತ್ತು ಮಲ್ಲಕಂಬದಂತಹ ಕಲೆಗಳನ್ನು ತರಬೇತಿ ನೀಡಿಸಿ ಕಾರ್ಯಕ್ರಮ ಮಾಡಿದ್ದಾರೆ. ಇನ್ನೂ ಹಲವು ವಿಭಿನ್ನ ಕಾರ್ಯಕ್ರಮಗಳೊಂದಿಗೆ ದೆಹಲಿ ಕನ್ನಡಿಗರ ಮನ ಗೆದ್ದಿದ್ದಾರೆ. ಗೆದ್ದವರೇ ಸೇವೆ ಮಾಡಲು ಹಿಂಜರಿಯುವ ಕಾಲದಲ್ಲಿ ಚುನಾವಣೆ ಸೋತರೂ ಧೃತಿಗೆಡದೆ ದೆಹಲಿ ಕರ್ನಾಟಕ ಸಂಘದ ಕಾರ್ಯಕ್ರಮಗಳಲ್ಲಿ ತಳಮಟ್ಟದ ಕಾರ್ಯಕರ್ತನಂತೆ ಸೇವೆ ಸಲ್ಲಿಸಿದ್ದಾರೆ.



**ಜಂಟಿ ಕಾರ್ಯದರ್ಶಿ–ಶ್ರೀಮತಿ ಅಶ್ವಿನಿ ಬಿ.ಎಸ್. :** ದೆಹಲಿಯಲ್ಲಿ ಕಳೆದ 30 ವರ್ಷಗಳಿಂದ ನೆಲೆಸಿರುವ ಇವರು ನಾಟಕ ಮತ್ತು ಸಂಗೀತದಲ್ಲಿ ಆಸಕ್ತಿ ಹೊಂದಿದ್ದು ದೆಹಲಿಯಲ್ಲಿ ಹಲವಾರು ನಾಟಕಗಳಲ್ಲಿ ಅಭಿನಯಿಸಿ ಕನ್ನಡಿಗರ ಮನಗೆದ್ದಿರುತ್ತಾರೆ. ತಮ್ಮದೇ ಆದ ಹವ್ಯಾಸಿ ರಂಗತಂಡ ಡೆಲ್ಲಿ ಫ್ರೆಂಡ್ಸ್ ಎಂಬುದನ್ನು ರಚಿಸಿಕೊಂಡು ಹಲವು ಸಮಾನ ಮನಸ್ಕರೊಡಗೂಡಿ ಹಲವು ನಾಟಕ ಪ್ರಯೋಗಗಳನ್ನು ಮಾಡಿರುತ್ತಾರೆ. ಸ್ನೇಹಾ ದೆಹಲಿ ಕನ್ನಡ ಲೇಡೀಸ್ ಅಸೋಸಿಯೇಶನ್‌ನಲ್ಲಿ ಸಕ್ರಿಯರಾಗಿರುವ ಇವರು ಅಲ್ಲಿಯ ಆಡಳಿತ ಮಂಡಳಿಯಲ್ಲಿ ಸದಸ್ಯರಾಗಿ, ಉಪಾಧ್ಯಕ್ಷೆಯಾಗಿ, ಪ್ರಸ್ತುತ ಖಜಾಂಚಿಯಾಗಿ ಸೇವೆ ಸಲ್ಲಿಸಿರುತ್ತಾರೆ. ದೆಹಲಿ ಕರ್ನಾಟಕ ಸಂಘದ ಕಾರ್ಯಕಾರಿ ಸಮಿತಿಯಲ್ಲಿ 2013–15, 2021–23ರ ಅವಧಿಗೆ ಸದಸ್ಯೆಯಾಗಿ ಆಯ್ಕೆಯಾಗಿರುತ್ತಾರೆ. ಪ್ರಸ್ತುತ ಸಂಘದ ಜಂಟಿ ಕಾರ್ಯದರ್ಶಿಯಾಗಿ ಸೇವೆ ಸಲ್ಲಿಸುತ್ತಿದ್ದಾರೆ.

## ಸದಸ್ಯರು




**ಶ್ರೀಮತಿ ಪೂಜಾ ರಾವ್ :** ಮೂಲತಃ ಕಾರ್ಕಳದವರಾದ ಇವರು ದೆಹಲಿ ಕರ್ನಾಟಕ ಸಂಘದಲ್ಲಿ ಸುಮಾರು 12 ವರ್ಷಗಳ ಸೇವೆಯೊಂದಿಗೆ ಸಂಘದ ಬೆಳವಣಿಗೆ ಮತ್ತು ಸಂಸ್ಕೃತಿಯ ಉಳಿವಿಗೆ ಮಹತ್ತರ ಕೊಡುಗೆ ನೀಡಿದ್ದಾರೆ. ಇವರು ಸಂಘದ ಕಾರ್ಯಕಾರಿ ಸಮಿತಿ ಸದಸ್ಯೆಯಾಗಿ, ಜಂಟಿ ಕಾರ್ಯದರ್ಶಿಯಾಗಿ ಮತ್ತು ಉಪಾಧ್ಯಕ್ಷೆಯಾಗಿ ನಿಷ್ಠೆಯಿಂದ ಸೇವೆ ಸಲ್ಲಿಸಿದ್ದಾರೆ. ಇವರು ಕಂಠದಾನ ಕಲಾವಿದೆ ಹಾಗೂ ಬಹುಭಾಷಾ ನಿರೂಪಕಿಯಾಗಿದ್ದು, ಕನ್ನಡ, ಹಿಂದಿ, ಇಂಗ್ಲಿಷ್, ತುಳು ಮತ್ತು ಕೊಂಕಣಿ ಭಾಷೆಗಳಲ್ಲಿ ಅನೇಕ ಸಾಂಸ್ಕೃತಿಕ ಮತ್ತು ಸಾಹಿತ್ಯಕ ಕಾರ್ಯಕ್ರಮಗಳನ್ನು ಯಶಸ್ವಿಯಾಗಿ ನಿರೂಪಿಸಿದ್ದಾರೆ. ಆತ್ಮವಿಶ್ವಾಸಭರಿತ ಮತ್ತು ನವಿರಾದ ಹಾಸ್ಯಮಿಶ್ರಿತ ಆಕರ್ಷಕ ವೇದಿಕೆ ನಿರೂಪಣೆ ದೆಹಲಿ NCR ನ ಕನ್ನಡಿಗರೆಲ್ಲರ ಮೆಚ್ಚುಗೆ ಪಡೆದಿದೆ. ಪ್ರಶಿಕ್ಷಿತ ಕರ್ನಾಟಕ ಶಾಸ್ತ್ರೀಯ ಹಾಗೂ ಲಘು ಸಂಗೀತ ಗಾಯಕಿಯಾಗಿದ್ದು ಸಂಗೀತದ ಮೂಲಕ ದೆಹಲಿಯಲ್ಲಿ ಕನ್ನಡದ ಸಾಂಸ್ಕೃತಿಕ ಚೈತನ್ಯಕ್ಕೆ ಸದಾ ಕೊಡುಗೆ ನೀಡುತ್ತಿದ್ದಾರೆ. ಹಿಂದಿ ದೂರದರ್ಶನ ಹಾಗೂ ಕನ್ನಡದ ದೂರದರ್ಶನ ಚಂದನ ವಾಹಿನಿಯಲ್ಲಿಯೂ ಕೆಲವೊಂದು ಕಾರ್ಯಕ್ರಮಗಳನ್ನು ನಿರೂಪಿಸಿದ್ದಾರೆ.



**ಶ್ರೀ ಶಿವಪ್ಪ ಎಂ :** ಕಳೆದ 30 ವರ್ಷಗಳಿಂದ ದೆಹಲಿಯಲ್ಲಿ ವಾಸವಾಗಿರುವ ಇವರು ರಾಷ್ಟ್ರೀಯ ಮಾನವ ಹಕ್ಕು ಮತ್ತು ಅಧಿಕಾರಿಗಳ ಕಾರ್ಯಾಲಯದಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ. ಮೂಲತಃ ಚಿಕ್ಕಮಗಳೂರು ಜಿಲ್ಲೆಯ ಕಡೂರಿನವರಾದ ಇವರು ಪರಿಶ್ರಮಿ ಕಾರ್ಯಕರ್ತರಾಗಿದ್ದು ರಂಗ ಚಟುವಟಿಕೆ, ಸಂಗೀತ ಹಾಗೂ ಆಟೋಟಗಳಲ್ಲಿ ವಿಶೇಷ ಆಸಕ್ತಿ ಹೊಂದಿರುತ್ತಾರೆ. ದೆಹಲಿ ಕರ್ನಾಟಕ ಸಂಘದ ವಿವಿಧ ಕಾರ್ಯಕ್ರಮಗಳಲ್ಲಿ ಪ್ರಾಸಂಗಿಕವಾಗಿ ತತ್‌ಕ್ಷಣ ಯಾವುದೇ ಜವಾಬ್ದಾರಿಯನ್ನು ಆಸಕ್ತಿಯಿಂದ ತೆಗೆದುಕೊಂಡು ನಿರ್ವಹಿಸಿದ್ದಾರೆ. ದೆಹಲಿ ಕರ್ನಾಟಕ ಸಂಘದ 2019–21 ಮತ್ತು 2021–23 ರ ಕಾರ್ಯಕಾರಿ ಸಮಿತಿಯಲ್ಲಿ ಸದಸ್ಯರಾಗಿ ಕಾರ್ಯ ನಿರ್ವಹಿಸಿ ಆಟೋಟಗಳು ಹಾಗೂ ಆಹಾರ ಮೇಳ ಯಶಸ್ವಿಯಾಗುವಲ್ಲಿ ಸಹಕರಿಸಿದ್ದಾರೆ.



**ಡಾ. ವೆಂಕಟಾಚಲ ಜಿ. ಹೆಗಡೆ :** ಸಂಘಕ್ಕೆ ಮೂರು ದಶಕಗಳಿಗೂ ಮೀರಿದ ನಿಸ್ಪ್ರಹ ಸೇವೆ. 'ಅಭಿಮತ' ಪತ್ರಿಕೆಯನ್ನು 1990 ರಲ್ಲಿ ಆಗಿನ ಅಧ್ಯಕ್ಷ ದಿ. ಎನ್.ಪಿ. ಭಟ್ಟರ ಚುಕ್ಕಾಣಿಯಲ್ಲಿ ಪ್ರಾರಂಭಿಸಿ ಅದರ ಸಂಪಾದಕರಾಗಿ ಮುಂದಿನ 14 ವರ್ಷಗಳ ಕಾಲ ನಿರಂತರವಾಗಿ ಕೆಲಸ ಮಾಡಿದವರು. ಎರಡು ಬಾರಿ ಅಧ್ಯಕ್ಷರಾಗಿ, ಒಮ್ಮೆ ಗೌರವ ಕಾರ್ಯದರ್ಶಿಗಳಾಗಿ ಕಾರ್ಯ ನಿರ್ವಹಿಸಿದ್ದಾರೆ. ಅಲ್ಲದೆ ದೆಹಲಿ ಕನ್ನಡ ಶಿಕ್ಷಣ ಸಂಸ್ಥೆಯಲ್ಲಿ ಹಲವು ಬಾರಿ ಆಡಳಿತ ಮಂಡಳಿಯಲ್ಲಿ ಸೇವೆ ಸಲ್ಲಿಸಿರುವ ಇವರು ಪ್ರಸ್ತುತ ಶಿಕ್ಷಣ ಸಂಸ್ಥೆಯ ಆಡಳಿತ ಮಂಡಳಿಯ ಸದಸ್ಯರಾಗಿದ್ದಾರೆ. ಸಂಘದ ಇಂದಿನ ಸಾಂಸ್ಕೃತಿಕ ಸಮುಚ್ಚಯವನ್ನು ರೂಪಿಸುವ ಮೊದಲ ಯೋಜನಾಪತ್ರದ ನೀಲಿ ನಕ್ಷೆಯನ್ನು 1997–98 ರಲ್ಲಿ ತಯಾರಿಸಿ ಅದನ್ನು ಕಾರ್ಯಗತಗೊಳಿಸಲು ದುಡಿದವರು. ಸಂಘದ ಸುವರ್ಣ ಮಹೋತ್ಸವದ ಹಬ್ಬವನ್ನು ಕನ್ನಡದ ಕಣ್ಮಣಿ ಡಾ. ರಾಜಕುಮಾರ್ ಸಂಜೆಯನ್ನು ದೆಹಲಿಯ ವಿಶಾಲ ಸಿರಿಫೋರ್ಟ್ ಸಭಾಂಗಣದಲ್ಲಿ 1998 ರಲ್ಲಿ ಆಯೋಜಿಸಿದವರು. ಸಂಘದ ಸಮುಚ್ಚಯಕ್ಕೆ 1998 ರಲ್ಲಿ ಒಂದು ಕೋಟಿ ಧನ ಸಹಾಯವನ್ನು ಪಡೆಯಲು ಕೆಲಸ ಮಾಡಿದವರು. ನಂತರ 2010 ರಲ್ಲಿ ಅಧ್ಯಕ್ಷರಾಗಿ ಮತ್ತೊಂದು ಕೋಟಿ ರೂಪಾಯಿಗಳ ಧನ ಸಹಾಯವನ್ನು ಸಂಘಕ್ಕೆ ತಂದರು. ಸಂಘದ ಸಂವಿಧಾನಕ್ಕೆ 2012 ರಲ್ಲಿ ವಿಸ್ತತವಾದ ಮತ್ತು ಕ್ರಾಂತಿಕಾರಕ ತಿದ್ದುಪಡಿಗಳನ್ನು ತಂದು ಅದು ಎಂದೆಂದೂ ಅಪ್ಪಟ ದೆಹಲಿ ಕನ್ನಡಿಗರ ಕೈಯಲ್ಲಿರುವಂತೆ ನೋಡಿಕೊಂಡವರು. ಜೆ.ಎನ್.ಯು. ಕನ್ನಡ ಪೀಠದ ಪ್ರಾಧ್ಯಾಪಕರ ಆಯ್ಕೆ ಸಮಿತಿಯ ಸದಸ್ಯರಾಗಿದ್ದವರು. ಭಾರತದ ವಿದೇಶಾಂಗ ಇಲಾಖೆಯಲ್ಲಿ ಕಾನೂನು ಸಲಹೆಗಾರರಾಗಿ ಹಲವಾರು ಗುರುತರ ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಜವಾಬ್ದಾರಿಗಳನ್ನು ನಿಭಾಯಿಸಿ ಪ್ರಸ್ತುತ ಪ್ರತಿಷ್ಠಿತ ಜವಾಹರಲಾಲ ನೆಹರೂ ವಿಶ್ವವಿದ್ಯಾಲಯದ ಅಂತರಾಷ್ಟ್ರೀಯ ಅಧ್ಯಯನ ಸಂಸ್ಥೆಯಲ್ಲಿ ಪ್ರಾಧ್ಯಾಪಕರು ಮತ್ತು ಅದರ ಅಂತರಾಷ್ಟ್ರೀಯ ಕಾನೂನು ವಿಭಾಗದ ಮುಖ್ಯಸ್ಥರಾಗಿದ್ದಾರೆ.



**ಡಾ. ಎಂ.ಎಸ್. ಶಶಿ ಕುಮಾರ್ :** ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಆನೇಕಲ್ಲಿನ ಇವರು ಭಾರತ ಸರಕಾರದ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಯಲ್ಲಿ ವಿಜ್ಞಾನಿಯಾಗಿ, ಜಂಟಿ ನಿರ್ದೇಶಕರ ಹುದ್ದೆಯಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ. ಕಳೆದ 25 ವರ್ಷಗಳಿಂದ ದೆಹಲಿಯಲ್ಲಿರುವ ಇವರು ಬೆಂಗಳೂರು ವಿಶ್ವವಿದ್ಯಾಲಯದಿಂದ ಸಸ್ಯಶಾಸ್ತ್ರ ವಿಭಾಗದಲ್ಲಿ ಎಂ.ಎಸ್ಸಿ. ಮತ್ತು ಸಸ್ಯಗಳ ಪಳೆಯುಳಿಕೆ ವಿಷಯದಲ್ಲಿ ಪಿ.ಎಚ್.ಡಿ. ಪದವಿ ಪಡೆದಿದ್ದಾರೆ. ಗ್ರಾಮೀಣ ಮತ್ತು ದುರ್ಬಲ ವರ್ಗದ ಮಹಿಳೆಯರು ಹಾಗೂ ಅನಿವಾರ್ಯವಾಗಿ ಶಾಲೆಯನ್ನು ಬಿಟ್ಟಿರುವ ಬಾಲಕಿಯರಿಗಾಗಿ ವಿಕಸನ ಮತ್ತು ಸಶಕ್ತಗೊಳಿಸುವಲ್ಲಿ ಹಲವಾರು ಸರ್ಕಾರೇತರ ಸಂಸ್ಥೆಗಳಿಗೆ, ಸಮಾಜ ಸೇವಾ ಸಂಘಟನೆಗಳಿಗೆ ತರಬೇತಿ ಮತ್ತು ತಾಂತ್ರಿಕ ಮಾರ್ಗದರ್ಶನ ಮಾಡಿದ್ದಾರೆ. ಇವರು ವಿಜ್ಞಾನ ಮತ್ತು ತಂತ್ರಜ್ಞಾನದಲ್ಲಿ 28 ವರ್ಷಗಳ ಸಂಶೋಧನಾ ಅನುಭವ ಹೊಂದಿದ್ದಾರೆ ಮತ್ತು ಸಣ್ಣ ಮತ್ತು ಮಧ್ಯಮ ಗಾತ್ರದ ಹೊಸ ಬಯೋಟೆಕ್ ಸಂಸ್ಥೆಗಳನ್ನು ಆರಂಭಿಸಲು ಬೇಕಾದ ಮಾರ್ಗದರ್ಶನ ಮತ್ತು ಸರ್ಕಾರದ ಅನುದಾನವನ್ನು ಕೊಡಿಸುವಲ್ಲಿ ವಿಶೇಷ ಪಾತ್ರ ವಹಿಸಿದ್ದಾರೆ. ಹಲವು ರಾಷ್ಟ್ರೀಯ ಮತ್ತು ಅಂತರ ರಾಷ್ಟ್ರೀಯ ಸಮ್ಮೇಳನ/ವಿಚಾರಗೋಷ್ಠಿಗಳಲ್ಲಿ ಭಾಗವಹಿಸಿದ್ದಾರೆ. ದೆಹಲಿ ಕನ್ನಡ ಶಿಕ್ಷಣ ಸಂಸ್ಥೆಯ ಆಡಳಿತ ಮಂಡಳಿಯ ಗೌರವ ಕಾರ್ಯದರ್ಶಿ ಹಾಗೂ ದೆಹಲಿ ಕನ್ನಡ ಶಾಲೆಯ ವ್ಯವಸ್ಥಾಪಕರಾಗಿ ಉತ್ತಮ ಕಾರ್ಯ ನಿರ್ವಹಿಸಿದ್ದಾರೆ. ದೆಹಲಿ ಕರ್ನಾಟಕ ಸಂಘದ 2021–23ರ ಅವಧಿಯಲ್ಲಿ ಉಪಾಧ್ಯಕ್ಷರಾಗಿ ಕ್ರೀಡಾ ಸಮಿತಿ ಅಧ್ಯಕ್ಷರಾಗಿ ಹಿಂದಿನ ಕಾರ್ಯಕಾರಿ ಸಮಿತಿಯಲ್ಲಿ ಸದಸ್ಯರಾಗಿ ಗಣನೀಯ ಸೇವೆ ಸಲ್ಲಿಸಿದ್ದಾರೆ.




**ಶ್ರೀ ನಾರಾಯಣ ಬಿ. :** ಕಳೆದ ಎರಡೂವರೆ ದಶಕಗಳಿಂದ ದೆಹಲಿಯ ಕರ್ನಾಟಕ ಭವನದಲ್ಲಿ ಕಾರ್ಯ ನಿರ್ವಹಿಸುತ್ತಿದ್ದು, ಉತ್ತಮ ರಂಗಭೂಮಿ ಕಲಾವಿದರಾಗಿ ದೆಹಲಿ ಕರ್ನಾಟಕ ಸಂಘವು ನಿರ್ಮಿಸಿದ್ದ 'ಸೇವಂತಿ ಪ್ರಸಂಗ', 'ಜೋಗಿಯ ರಾಣಿ' ಎರಡು ನಾಟಕಗಳಲ್ಲಿ ನಟಿಸಿ ದೆಹಲಿ ಕನ್ನಡಿಗರಿಗೆ ಚಿರಪರಿಚಿತರಾಗಿರುತ್ತಾರೆ. ದೆಹಲಿಯ ಹವ್ಯಾಸಿ ರಂಗತಂಡಗಳಾದ ದಿನಕರ ಹಾಗೂ ಗಣೇಶ ಮಿತ್ರ ಮಂಡಳಿಯ ಸಕ್ರಿಯ ಸದಸ್ಯರಾಗಿದ್ದು ಈ ರಂಗತಂಡಗಳಿಂದ ಮೂಡಿ ಬಂದ ಹಲವು ನಾಟಕಗಳಲ್ಲಿ ನಟಿಸಿದ್ದು, ಈ ನಾಟಕಗಳು ರಾಜ್ಯದ ಹಾಗೂ ರಾಷ್ಟ್ರದ ಹಲವಾರು ಭಾಗಗಳಲ್ಲಿ ಪ್ರದರ್ಶನಗೊಂಡಿರುತ್ತದೆ ಹಾಗೂ ಹಲವಾರು ಕನ್ನಡಪರ ಚಟುವಟಿಕೆಗಳಲ್ಲಿ ಸಕ್ರಿಯರಾಗಿರುವ ಇವರು ಈ ಹಿಂದೆ ದೆಹಲಿ ಒಕ್ಕಲಿಗ ಗೌಡ ಸಂಘದ ಖಜಾಂಚಿಯಾಗಿ, ಎರಡು ಬಾರಿ ದೆಹಲಿ ಕನ್ನಡ ಶಿಕ್ಷಣ ಸಂಸ್ಥೆಯ ಆಡಳಿತ ಮಂಡಳಿಯ ಸದಸ್ಯರಾಗಿ ಹಾಗೂ ದೆಹಲಿ ಕರ್ನಾಟಕ ಸಂಘದ ಕಾರ್ಯಕಾರಿ ಸಮಿತಿಯ ಸದಸ್ಯರಾಗಿ, ಪ್ರಸ್ತುತ ಜಂಟಿ ಕಾರ್ಯದರ್ಶಿಯಾಗಿ ಸೇವೆ ಸಲ್ಲಿಸುತ್ತಿದ್ದಾರೆ.



**ಶ್ರೀ ಕೃಷ್ಣಪ್ಪ ಎಂ. :** ಮೂಲತಃ ಕೋಲಾರ ಜಿಲ್ಲೆಯವರಾದ ಇವರು ಮೆಕ್ಯಾನಿಕಲ್ ಇಂಜಿನಿಯರಿಂಗ್‌ನಲ್ಲಿ ಡಿಪ್ಲೊಮಾ ಪದವಿ ಪಡೆದಿದ್ದು, ಗುರುಗಾಂವ್‌ನ ಹೀರೋ ಮೋಟೋ ಕಾರ್ಪ್ ಕಂಪನಿಯಲ್ಲಿ ತಾಂತ್ರಿಕ ಪರಿಣಿತರಾಗಿ ಕಳೆದ 29 ವರ್ಷಗಳಿಂದ ಸೇವೆ ಸಲ್ಲಿಸುತ್ತಿದ್ದಾರೆ. ಗುರುಗಾಂವ್ ಕನ್ನಡ ಸಂಘದಲ್ಲಿ ಜಂಟಿ ಕಾರ್ಯದರ್ಶಿಯಾಗಿ ಮತ್ತು ಎರಡು ಬಾರಿ ಪ್ರಧಾನ ಕಾರ್ಯದರ್ಶಿಯಾಗಿ ಹಾಗು ಅಧ್ಯಕ್ಷರಾಗಿಯೂ ಸೇವೆ ಸಲ್ಲಿಸಿರುತ್ತಾರೆ. ಉತ್ತಮ ಗಾಯಕರೂ ಆದ ಇವರು ಅಲ್ಲಿನ ಕನ್ನಡ ಸಂಘವನ್ನು ಚಿಕ್ಕಮಟ್ಟದಿಂದ ದೊಡ್ಡ ಮಟ್ಟಕ್ಕೆ ಬೆಳೆಸಿದ್ದಾರೆ. ಜೊತೆಗೆ ಬಹಳ ಉತ್ತಮ ಕಾರ್ಯಕ್ರಮಗಳನ್ನು, ಕೆಲವು ಐತಿಹಾಸಿಕ ಕಾರ್ಯಕ್ರಮಗಳನ್ನು ಆಯೋಜಿಸಿರುತ್ತಾರೆ. ಮೊದಲಬಾರಿಗೆ ಸಂಘದ ಸದಸ್ಯರುಗಳಿಗೆ ಅಯೋಧ್ಯೆ ಪ್ರವಾಸ ಮತ್ತು ರಾಮ ಲಲ್ಲನ ದರ್ಶನ, ಪ್ರಯಾಗ್ ರಾಜ್‌ನ ಮಹಾಕುಂಭ ಮೇಳದ ತ್ರಿವೇಣಿ ಸಂಗಮದಲ್ಲಿ ಸ್ನಾನ ಮತ್ತು ಒಂದೇ ಕಾರ್ಯಕ್ರಮಕ್ಕೆ 100 ಜನಕ್ಕಿಂತ ಹೆಚ್ಚು ಕಲಾವಿದರನ್ನು ಕರ್ನಾಟಕದಿಂದ ಕರೆಸಿ ಜೊತೆಯಲ್ಲಿ ಸ್ಥಳೀಯ ಕಲಾವಿದರನ್ನು ಸೇರಿಸಿ ಹೊರನಾಡು ಉತ್ಸವ ಕಾರ್ಯಕ್ರಮವನ್ನು ಮಾಡಿರುತ್ತಾರೆ. ಸಂಘಟಕರಾಗಿ ಗುರುಗ್ರಾಮ ಕನ್ನಡ ಸಂಘಕ್ಕೆ ಮೊದಲ ಬಾರಿಗೆ ಕರ್ನಾಟಕ ಸರ್ಕಾರದಿಂದ ಅನುದಾನ ತರುವಲ್ಲಿ ಯಶಸ್ವಿಯಾಗಿರುವ ಇವರು ಸಂಘಕ್ಕೆ ನಿರಂತರವಾಗಿ ಸೇವೆ ನೀಡುತ್ತಿದ್ದಾರೆ.



**ಶ್ರೀಮತಿ ಜಯಶ್ರೀ ಬಸವರಾಜು ಬಿ.ಕೆ :** ಮೂಲತಃ ಧಾರವಾಡದ ಇವರು ಕರ್ನಾಟಕ ವಿಶ್ವವಿದ್ಯಾಲಯದಿಂದ ಬಿ.ಎಸ್ಸಿ. ಪದವೀಧರೆ. ಕನ್ನಡ ಸಾಹಿತ್ಯ, ಕಲೆ, ಸಂಗೀತ, ಸಂಸ್ಕೃತಿ ಇವುಗಳಲ್ಲಿ ಅಪಾರ ಆಸಕ್ತಿ ಹೊಂದಿರುವ ಇವರು ದೆಹಲಿ ಕರ್ನಾಟಕ ಸಂಘದಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡಿರುತ್ತಾರೆ. ಇವರು ದೆಹಲಿಯ ಅನೇಕ ಕನ್ನಡ ಸಂಘ ಸಂಸ್ಥೆಗಳಲ್ಲಿ ಸಕ್ರಿಯರಾಗಿದ್ದು ಪ್ರಸ್ತುತ ಜನಕಪುರಿ ಕನ್ನಡ ಕೂಟದ ಕಾರ್ಯಕಾರಿ ಸಮಿತಿಯಲ್ಲಿ ಸದಸ್ಯೆಯಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಜನಕಪುರಿ ಮಹಿಳಾ ಮಂಡಳಿಯ ಜಂಟಿ ಕಾರ್ಯದರ್ಶಿಯಾಗಿ, ಖಜಾಂಚಿಯಾಗಿ, ಕಾರ್ಯದರ್ಶಿಯಾಗಿ ಹಾಗೂ ಮೂರು ಬಾರಿ ಅಧ್ಯಕ್ಷಳಾಗಿ ಕಾರ್ಯ ನಿರ್ವಹಿಸಿದ್ದಾರೆ. ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತಿನ ಕದಳಿ ಮಹಿಳಾ ವೇದಿಕೆಯ ಅಧ್ಯಕ್ಷರಾಗಿ, ದೆಹಲಿ ಕನ್ನಡ ಶಿಕ್ಷಣ ಸಂಸ್ಥೆಯ ಕಾರ್ಯಕಾರಿ ಸಮಿತಿಯ ಸದಸ್ಯೆಯಾಗಿ ಸೇವೆ ಸಲ್ಲಿಸಿದ್ದಾರೆ.



**ಶ್ರೀಮತಿ ಶುಭಾ ದೇವಿಪ್ರಸಾದ್ :** ಮೂಲತಃ ಉಡುಪಿಯವರಾದ ಇವರು ಕಳೆದ 2 ದಶಕಗಳಿಂದ ದೆಹಲಿಯಲ್ಲಿ ವಾಸವಾಗಿದ್ದು, ಸಂಗೀತಾಭ್ಯಾಸ ಪಡೆದು ಇದೀಗ ಮಕ್ಕಳಿಗೆ ಸಂಗೀತ ವಿದ್ಯಾದಾನ ಕಾರ್ಯದಲ್ಲಿ ತೊಡಗಿಸಿಕೊಂಡಿರುತ್ತಾರೆ. ದೆಹಲಿ ಕರ್ನಾಟಕ ಸಂಘದ ಸಾಂಸ್ಕೃತಿಕ ಸಮಿತಿಯ ಸದಸ್ಯೆಯಾಗಿ, ನಂತರ ಕಾರ್ಯಕಾರಿ ಸಮಿತಿಯ ಸದಸ್ಯೆಯಾಗಿ ಹತ್ತು ಹಲವು ಕಾರ್ಯಕ್ರಮ ರೂಪಿಸುವಲ್ಲಿ ಯಶಸ್ವಿಯಾಗಿರುತ್ತಾರೆ. ಇವರು ದೆಹಲಿಯ ಹಲವಾರು ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಭಾಗವಹಿಸಿ ತಮ್ಮ ಕಲಾವಂತಿಕೆಯನ್ನು ಮೆರೆದಿದ್ದಾರೆ.



**ಶ್ರೀ ಆರ್. ಹರಿಕೃಷ್ಣ :** ದೆಹಲಿಯ ಕರ್ನಾಟಕ ಭವನದಲ್ಲಿ 1989 ರಿಂದ ಕಾರ್ಯ ನಿರ್ವಹಿಸುತ್ತಿರುವ ಇವರು ಕ್ರೀಡಾಸಕ್ತರು ಹಾಗೂ ಉತ್ತಮ ಕ್ರೀಡಾಪಟು. ದೆಹಲಿ ಕರ್ನಾಟಕ ಸಂಘದ ವತಿಯಿಂದ ನಡೆಯುವ ವಾರ್ಷಿಕ ಕ್ರೀಡಾಕೂಟದಲ್ಲಿ ಹಲವಾರು ಬಾರಿ ಸ್ಪರ್ಧಿಸಿ ಕೇರಂ, ಬ್ಯಾಡ್ಮಿಂಟನ್ ಹಾಗೂ ಕ್ರಿಕೆಟ್ ಆಟಗಳಲ್ಲಿ ಪ್ರಥಮ ಸ್ಥಾನ ಗಳಿಸಿದ ಹಿರಿಮೆ ಇವರದಾಗಿದೆ. ಪ್ರಸ್ತುತ ಇವರು ಕರ್ನಾಟಕ ರಾಜ್ಯದ ಮಾನ್ಯ ಮುಖ್ಯಮಂತ್ರಿಗಳ ಖಾಸಗಿ ಸಿಬ್ಬಂದಿಯಾಗಿ 2023 ರಿಂದ ಕಾರ್ಯ ನಿರ್ವಹಿಸುತ್ತಿದ್ದಾರೆ ಹಾಗೂ ಕರ್ನಾಟಕ ಭವನದ ನೌಕರರ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷರಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಪೂರ್ವದಲ್ಲೂ 2013 ರಿಂದ 2018 ರ ವರೆಗೂ ಮಾನ್ಯ ಮುಖ್ಯಮಂತ್ರಿಗಳ ಖಾಸಗಿ ಸಿಬ್ಬಂದಿಯಾಗಿ ಹಾಗೂ 1993 ರಿಂದ 1997 ರ ವರೆಗೂ ಕರ್ನಾಟಕ ಭವನದ ನೌಕರರ ಕ್ಷೇಮಾಭಿವೃದ್ಧಿ ಸಂಘದ ಕಾರ್ಯದರ್ಶಿಯಾಗಿ ಸೇವೆ ಸಲ್ಲಿಸಿರುವ ಅನುಭವ ಇವರದು.



**ರಾಜಕುಮಾರ :** ಮೂಲತಃ ಕಲ್ಯಾಣ ಕರ್ನಾಟಕದ ಕಲಬುರ್ಗಿ ಜಿಲ್ಲೆಯವರಾದ ಇವರು ಗುರುಗ್ರಾಮದಲ್ಲಿ ವಾಸಿಸುತ್ತಿದ್ದು, ಸುಮಾರು 26 ವರ್ಷಗಳಿಂದ ಅಂತರರಾಷ್ಟ್ರೀಯ ಖ್ಯಾತಿಯ ಹೀರೋ ಮೋಟೋ ಕಾರ್ಪ್ ಲಿಮಿಟೆಡ್ ಸಂಸ್ಥೆಯಲ್ಲಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಜೊತೆಗೆ, ನಮ್ಮ ಹೆಮ್ಮೆಯ ಗುರುಗಾಂವ್ ಕನ್ನಡ ಸಂಘದಲ್ಲಿ ಗುರುಗ್ರಾಮದ ಹಿರಿಯ ಕನ್ನಡಿಗರು, ಸ್ನೇಹಿತರು ಹಾಗೂ ಸಹೋದರ, ಸಹೋದರಿಯರ ಜೊತೆಗೂಡಿ 2 ಬಾರಿ ಕಾರ್ಯಕಾರಿ ಸಮಿತಿಯ ಸದಸ್ಯನಾಗಿ ಮತ್ತು 2 ಬಾರಿ ಉಪಾಧ್ಯಕ್ಷನಾಗಿ ಕನ್ನಡಪರ ಕಾರ್ಯಕ್ರಮಗಳನ್ನು ತುಂಬಾ ಪ್ರಾಮಾಣಿಕವಾಗಿ, ಉತ್ಸುಕನಾಗಿ ಇಡೀ ತಂಡದ ಜೊತೆ ಹಗಲಿಗೆ ಹೆಗಲು ಕೊಟ್ಟು ಕೆಲಸ ಮಾಡಿದ ಅನುಭವ ಹೊಂದಿರುತ್ತಾರೆ. ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತು ದೆಹಲಿ ಘಟಕದಲ್ಲಿ ಕಾರ್ಯಕಾರಿ ಸಮಿತಿಯ ಸದಸ್ಯನಾಗಿ, ಕಾರ್ಯದರ್ಶಿಯಾಗಿ ಮತ್ತು ಈಗ ಪ್ರಸ್ತುತ ಉಪಾಧ್ಯಕ್ಷನಾಗಿ ಸುಮಾರು 8 ವರ್ಷಗಳಿಂದ ಕನ್ನಡ ಭಾಷೆ, ಸಂಸ್ಕೃತಿ, ವಚನ ಸಾಹಿತ್ಯ, ಕನ್ನಡ ಸಾಹಿತ್ಯ, ಜಾನಪದ ಸಾಹಿತ್ಯ ಹಾಗೂ ಸಂಗೀತ ಕಲೆಯನ್ನು ಕನ್ನಡ ಮಕ್ಕಳು, ಕನ್ನಡೇತರರಲ್ಲೂ ಪಸರಿಸಲು ಉತ್ತಮವಾದ ಕಾರ್ಯಕ್ರಮಗಳನ್ನು ದೆಹಲಿ ಎನ್‌ಸಿಆರ್ ನಲ್ಲಿ ಆಯೋಜಿಸುವ ಕಾಯಕದಲ್ಲಿ ನಮ್ಮ ಪರಿಷತ್ತಿನ ತಂಡದೊಂದಿಗೆ ನಿರಂತರವಾಗಿ ಕೈ ಜೋಡಿಸುತ್ತಿದ್ದಾರೆ. ಕಲ್ಯಾಣ ಕನ್ನಡಿಗರ ಸಾಂಸ್ಕೃತಿಕ ಸಂಘ ನವದೆಹಲಿಯಲ್ಲಿ ಜಂಟಿ ಕಾರ್ಯದರ್ಶಿಯಾಗಿ ದೆಹಲಿ ಎನ್‌ಸಿಆರ್ ನಲ್ಲಿ ಕಲ್ಯಾಣ ಕರ್ನಾಟಕದ ಕನ್ನಡಿಗರ ಧ್ವನಿಯಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ.




ಚುನಾವಣೆಯನ್ನು ವ್ಯವಸ್ಥಿತವಾಗಿ ನಡೆಸಿಕೊಟ್ಟ ಶ್ರೀ ಈಶ್ವರ ಮಡಿವಾಳ ಅವರನ್ನು ಸಂಘದ ಪರವಾಗಿ ಅಭಿನಂದಿಸುತ್ತಿರುವುದು

ಸಂಘದ ಜಂಟೀ ಕಾರ್ಯಕಾರಿ ಸಮಿತಿ ಸಭೆಯನ್ನು ದಿನಾಂಕ 13.04.2026ರಂದು ಆಯೋಜಿಸಲಾಗಿತ್ತು. 2026–28ರ ಅವಧಿಗೆ 12.04.2026 ರಂದು ನಡೆದ ಚುನಾವಣೆಯಲ್ಲಿ ಆಯ್ಕೆಗೊಂಡ ಹಾಗೂ ಹಿಂದಿನ ಕಾರ್ಯಕಾರಿ ಸಮಿತಿಯ (2024–26) ಎಲ್ಲ ಪದಾಧಿಕಾರಿಗಳನ್ನು ಮತ್ತು ಸದಸ್ಯರನ್ನು ಹಾಗೂ ಚುನಾವಣಾ ಅಧಿಕಾರಿಯವರನ್ನು ನಿಕಟಪೂರ್ವ ಅಧ್ಯಕ್ಷರಾದ ಶ್ರೀ ಸಿ.ಎಂ. ನಾಗರಾಜ ಅವರು ಸ್ವಾಗತಿಸಿದರು.

ಸಭೆಯ ಮುನ್ನ ಚುನಾವಣೆಯನ್ನು ಅತ್ಯಂತ ವ್ಯವಸ್ಥಿತ ರೀತಿಯಲ್ಲಿ ನಡೆಸಿಕೊಟ್ಟ ಶ್ರೀ ಈಶ್ವರ ಮಡಿವಾಳ ಅವರನ್ನು ಅಭಿನಂದಿಸಿ ಕೃತಜ್ಞತೆಯನ್ನು ಸಲ್ಲಿಸಲಾಯಿತು. ಹಾಗೆಯೇ ಕಾರ್ಯಕಾರಿ ಸಮಿತಿಯಿಂದ ನಿರ್ಗಮಿಸುತ್ತಿರುವ ಸದಸ್ಯರಿಗೆ ಮತ್ತು ಪದಾಧಿಕಾರಿಗಳಿಗೆ ಧನ್ಯವಾದಗಳನ್ನು ಅರ್ಪಿಸಿದರು.



2026–2028ರ ಅವಧಿಗಾಗಿ ನಡೆದ ಚುನಾವಣೆಯಲ್ಲಿ ಆಯ್ಕೆಗೊಂಡ ಸಂಘದ ಅಧ್ಯಕ್ಷರಾದ ಶ್ರೀ ರೇಣುಕುಮಾರ್ ಆರ್. ಅವರು ನಿಕಟಪೂರ್ವ ಅಧ್ಯಕ್ಷರಾದ ಶ್ರೀ ಸಿ.ಎಂ. ನಾಗರಾಜ ಅವರನ್ನು ಅಭಿನಂದಿಸಿ ಬೀಳ್ಕೊಡುತ್ತಿರುವುದು



ಜಂಟಿ ಕಾರ್ಯಕಾರಿ ಸಮಿತಿ ಸಭೆಯಲ್ಲಿ ಹಾಜರಿದ್ದ ನೂತನವಾಗಿ ಆಯ್ಕೆಗೊಂಡ ಮತ್ತು ಹಿಂದಿನ ಕಾರ್ಯಕಾರಿ ಸಮಿತಿಯ (2024–26) ಪದಾಧಿಕಾರಿಗಳು ಮತ್ತು ಸದಸ್ಯರು



## ರಾಷ್ಟ್ರ ರಾಜಧಾನಿ ನವದೆಹಲಿಯ ಸಂಸತ್ ಭವನದ ಪ್ರೇರಣಾ ಸ್ಥಳದಲ್ಲಿ ಅನುಭವ ಮಂಟಪದ ರೂವಾರಿ ಶ್ರೀ ಬಸವೇಶ್ವರರ ಜಯಂತಿ ಆಚರಣೆ

ದಿನಾಂಕ 20.04.2026 ರಂದು ಬಸವ ಜಯಂತಿಯ ಅಂಗವಾಗಿ ಸಂಸತ್ ಭವನ ಪ್ರೇರಣಾ ಸ್ಥಳದಲ್ಲಿ ಜಗಜ್ಯೋತಿ ಬಸವಣ್ಣನವರ ಪ್ರತಿಮೆಗೆ ಕೇಂದ್ರ ಉಕ್ಕು ಮತ್ತು ಭಾರೀ ಕೈಗಾರಿಕಾ ಮಂತ್ರಿಗಳಾದ ಶ್ರೀ ಹೆಚ್.ಡಿ. ಕುಮಾರಸ್ವಾಮಿ, ಕೇಂದ್ರ ಸಂಸದೀಯ ವ್ಯವಹಾರಗಳ ಮಂತ್ರಿಗಳಾದ ಶ್ರೀ ಕಿರಣ್ ರಿಜಿಜು ಹಾಗೂ ಕೇಂದ್ರಿಯ ರಾಜ್ಯ ರೈಲ್ವೆ ಮತ್ತು ಜಲಶಕ್ತಿ ಇಲಾಖೆಯ ಮಂತ್ರಿಗಳಾದ ಶ್ರೀ ವಿ. ಸೋಮಣ್ಣ ರವರ ನೇತೃತ್ವದಲ್ಲಿ ಪುಷ್ಪ ನಮನ ಸಲ್ಲಿಸಿದರು.



ಶ್ರೀ ವಿ. ಸೋಮಣ್ಣನವರು ಕೇಂದ್ರ ಮಂತ್ರಿಗಳಾದ ನಂತರ ಎರಡನೇ ಬಾರಿಗೆ ಬಸವ ಜಯಂತಿ ಆಚರಣೆಗೆ ಕಾರಣೀಭೂತರಾದರು. ಇದರೊಂದಿಗೆ ರಾಣಿ ಕಿತ್ತೂರು ಚೆನ್ನಮ್ಮ ಜಯಂತಿ ಕಾರ್ಯಕ್ರಮಕ್ಕೂ ಚಾಲನೆ ನೀಡಿರುವ ಶ್ರೀಯುತರ ಪ್ರಯತ್ನದ ಫಲವಾಗಿ ಶಕ್ತಿ ಕೇಂದ್ರ ಸಂಸತ್ ಆವರಣದಲ್ಲಿ ಕರ್ನಾಟಕದ ಹಿರಿಯ ಚೇತನಗಳಿಗೆ ಗೌರವಾರ್ಪಣೆಗೆ ಅವಕಾಶ ದೊರೆತಂತಾಗಿದೆ. ಇದಕ್ಕಾಗಿ ಸಮಸ್ತ ಕನ್ನಡಿಗರ ಪರವಾಗಿ ಶ್ರೀ ಸೋಮಣ್ಣನವರಿಗೆ ಧನ್ಯವಾದಗಳು.

ದೆಹಲಿ ಕರ್ನಾಟಕ ಸಂಘದ ಪದಾಧಿಕಾರಿಗಳು ಹಾಗು 700ಕ್ಕೂ ಹೆಚ್ಚು ದೆಹಲಿ ಹಾಗೂ ಎನ್ ಸಿ ಆರ್ ಕನ್ನಡಿಗರು, ಕನ್ನಡ ಶಿಕ್ಷಣ ಸಂಸ್ಥೆಯ ಶಿಕ್ಷಕರು, ವಿದ್ಯಾರ್ಥಿಗಳು, ಪೋಷಕರು ಉಪಸ್ಥಿತರಿದ್ದ ಈ ವರ್ಣರಂಜಿತ ಕಾರ್ಯಕ್ರಮದಲ್ಲಿ ಸ್ಥಳೀಯ ಕಲಾವಿದರಾದ ಶ್ರೀ ಭೀಮಸೇನ ಭಜಂತ್ರಿ ಹಾಗೂ ಕು. ಜನಿತರವರಿಂದ ವಚನಗಾಯನ ಸೊಗಸಾಗಿ ಮೂಡಿ ಬಂತು. ಶ್ರೀ ವಿ. ಸೋಮಣ್ಣನವರ ಮುಂದಾಳತ್ವದಲ್ಲಿ, ರೈಲ್ವೇ ಇಲಾಖೆಯಿಂದ ಆಯೋಜಿತ ಈ ಕಾರ್ಯಕ್ರಮದಲ್ಲಿ ದೆಹಲಿ ಕರ್ನಾಟಕ ಸಂಘ ಪರೋಕ್ಷವಾಗಿ ಭಾಗವಹಿಸುವ ಮೂಲಕ ಕಾರ್ಯಕ್ರಮ ಯಶಸ್ಸಿನಲ್ಲಿ ಭಾಗಿಯಾಯಿತು.❑



# ಗುರುಗಾಂವ್ ಕನ್ನಡ ಸಂಘದಲ್ಲಿ ಯುಗಾದಿ ಉತ್ಸವ–2026



ಗುರುಗಾಂವ್ ಕನ್ನಡ ಸಂಘವು ದೆಹಲಿ ಕರ್ನಾಟಕ ಸಂಘದ ಸಹಯೋಗದೊಂದಿಗೆ 26.04.2026 ರಂದು ಗುರುಗಾಂವ್ ನ Excelsior American school ನಲ್ಲಿ ಯುಗಾದಿ ಉತ್ಸವವನ್ನು ಆಚರಿಸಲಾಯಿತು. ಕೀರ್ತನಾ ಕಟ್ಟಿಮನಿ ಅವರು ಬಿಡಿಸಿದ ರಂಗೋಲಿ ಕಣ್ತುಂಬುವಂತಿತ್ತು. ಶ್ರೀಮತಿ ಸುನಂದಾ ದರ್ಗಾ ಅವರು ತಯಾರಿಸಿದ ಎಳ್ಳು ಬೆಲ್ಲ ಸವಿದು, ತಣ್ಣನೆಯ ಮಜ್ಜಿಗೆಯನ್ನು ಸೇವಿಸುತ್ತ ಸ್ಥಳೀಯ ಕಲಾವಿದರ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಆನಂದಿಸಿದೆವು. ತದನಂತರ ನಾಡಗೀತೆಯೊಂದಿಗೆ ಸಭಾ ಕಾರ್ಯಕ್ರಮ ಆರಂಭಗೊಂಡಿತು. ಗುರಗಾಂವ್ ಕನ್ನಡ ಸಂಘವು ಆಯೋಜಿಸಿದ್ದ ಈ ಕಾರ್ಯಕ್ರಮವು ಅತ್ಯಂತ ಅದ್ಭುತವಾಗಿತ್ತು. ಪ್ರತಿಯೊಂದು ಯಶಸ್ವಿ ಕಾರ್ಯಕ್ರಮದ ಹಿಂದೆ ಹಲವಾರು ಜನರ ಪರಿಶ್ರಮವಿರುತ್ತದೆ.

ಈ ಉತ್ಸವದಲ್ಲಿ ಇಡೀ ದೆಹಲಿ–ಎನ್‌ಸಿಆರ್ ಕನ್ನಡಿಗರೆಲ್ಲರೂ ನಾವೆಲ್ಲರೂ ಒಂದೇ ಕುಟುಂಬದ ಸದಸ್ಯರು ಇದು ನಮ್ಮ ಮನೆಯದೇ ಕಾರ್ಯಕ್ರಮ ಎನ್ನುವ ರೀತಿಯಲ್ಲಿ ಕಾರ್ಯಕ್ರಮದ ಹಿಂದಿನ ದಿನದವರೆಗೂ ಅತಿ ಸಂತೋಷದಿಂದ ಪಾಲ್ಗೊಂಡಿದ್ದರು. ಮೂರು ವರ್ಷದ ಮಗುವಿನಿಂದ ಹಿಡಿದು ಮುಪ್ಪಿಗೆ ಬಂದವರವರೆಗೂ, ಎಲ್ಲರೂ ಸಭಾಂಗಣದ ಒಳಗೆ ಹೊರಗೆ ಓಡಾಡಿಕೊಂಡಿದ್ದು ಎಲ್ಲೆಲ್ಲೂ ಹಬ್ಬದ ವಾತಾವರಣವಿತ್ತು. ನಗು, ಹಾಸ್ಯದಿಂದಾಗಿ ಇಡೀ ವಾತಾವರಣ ಸಂಭ್ರಮಿಸುತ್ತಿತ್ತು. ಸಭಾ ಕಾರ್ಯಕ್ರಮದಲ್ಲಿ ಅತಿಥಿ ಗಣ್ಯರಾದ ಅಲ್ಲಮಪ್ರಭು ಗುಡ್ಡದ, ಡಾ. ನಿರಂಜನ್ ನಾಯ್ಕ್, ಶ್ರೀ ರೇಣುಕುಮಾರ್ ಆರ್., ಶ್ರೀ ರಾಧಾಕೃಷ್ಣ, ಡಾ. ಅವನೀಂದ್ರನಾಥ್ ರಾವ್, ಶ್ರೀ ಪ್ರಸನ್ನ ಬಂಟ್ವಾಳ ಇವರೆಲ್ಲರೂ ಸಂದರ್ಭಕ್ಕನುಗುಣವಾಗಿ ಆಡಿದ ಮಾತುಗಳು ಮೌಲ್ಯಯುತವಾಗಿದ್ದವು. ಬಳಿಕ ಗಣ್ಯರೆಲ್ಲರಿಗೂ ಅತ್ಯಂತ ಪ್ರೀತಿಯಿಂದ ಗೌರವ ಸಮರ್ಪಣೆ ಸಲ್ಲಿಸುವುದರ ಜೊತೆಗೆ ಊಟದ ವ್ಯವಸ್ಥೆಯನ್ನು ಪ್ರಾಯೋಜಿಸಿದ ಶ್ರೀ ಹರೀಶ್ ಶೆಟ್ಟಿ ದಂಪತಿಗಳಿಗೆ ಗೌರವ ಸಮರ್ಪಣೆ ಸಲ್ಲಿಸಲಾಯಿತು. ನಿವೃತ್ತಿ ಹೊಂದಿದ ಭಿವಾಡಿಯ ಶ್ರೀ ಗೋಪಾಲ್ ಕೃಷ್ಣ ಭಟ್ ಅವರಿಗೂ ಅಭಿನಂದನೆ ಸಲ್ಲಿಸಲಾಯಿತು. ಸುಮಾರು 80 ದೇಶಗಳಲ್ಲಿ ಕಾರ್ಯಕ್ರಮ ನೀಡಿದ ಹೆಸರಾಂತ ಜಾನಪದ ಸಂರಕ್ಷಣಾ ಪರಿಷತ್ ಕಲಾ ತಂಡದ ಕಲಾವಿದರಾದ ಗೋ.ನಾ. ಸ್ವಾಮಿ ಅವರ ಸಾರಥ್ಯದಲ್ಲಿ ಜಾನಪದ ಝೇಂಕಾರ ಅತ್ಯದ್ಭುತ ಹಾಡುಗಳು, ಜಾದು, ಹಾಸ್ಯವನ್ನು ಆನಂದಿಸಿದೆವು. ಕಾರ್ಯಕ್ರಮದ ಕೊನೆಗೆ ಒಬ್ಬಟ್ಟಿನ ಊಟ ಸವಿಯುತ್ತಾ ಜನರೊಂದಿಗೆ ಹರಟುತ್ತಾ ಸಮಯ ಕಳೆದದ್ದೇ ಗೊತ್ತಾಗಲಿಲ್ಲ. ಒಟ್ಟಾರೆ ಕಾರ್ಯಕ್ರಮ ಯಾವ ಅಡೆತಡೆಯೂ ಇಲ್ಲದೇ ಅಚ್ಚುಕಟ್ಟಾಗಿ ನಡೆದು ಅಭೂತಪೂರ್ವ ಯಶಸ್ಸಿಗೆ ಮುನ್ನುಡಿ ಬರೆಯಿತು.

ಗುರುಗಾಂವ್ ಸಂಘದ ಅಧ್ಯಕ್ಷರಾದ ಶ್ರೀ ಶಾಂತಕುಮಾರ ನಿಂಬಾಳ ಅವರು ತಮ್ಮ ಅಧ್ಯಕ್ಷ ಭಾಷಣದಲ್ಲಿ ಗುರುಗಾಂವ್ ಸಂಘಕ್ಕೆ ಸಹಾಯ ಹಸ್ತ ಚಾಚಿದವರಿಗೆ ಕೃತಜ್ಞತೆ ಸಲ್ಲಿಸುತ್ತಾ ಗುರುಗಾಂವ್ ಕನ್ನಡ ಸಂಘದ ವತಿಯಿಂದ ಎಷ್ಟು ಕೃತಜ್ಞತೆಗಳು ಹೇಳಿದರು ಕಡಿಮೆ ಏಕೆಂದರೆ ತಮಗೆಲ್ಲರಿಗೂ ಕೃತಜ್ಞತೆ ಸಲ್ಲಿಸಲು ನನಗೆ ಪದಗಳೇ ಸಿಗುತ್ತಿಲ್ಲ ಎಂದರು. ನಮ್ಮ ಸಂಘದ ಈ ಯುಗಾದಿ ಉತ್ಸವಕ್ಕೆ ದೆಹಲಿ ಕರ್ನಾಟಕ ಸಂಘ ಎಂದಿನಂತೆ ತನ್ನ ಸಹಯೋಗ ನೀಡಿದೆ. ಅದಕ್ಕಾಗಿ ಸಂಘದ ವತಿಯಿಂದ ಕೃತಜ್ಞತೆಗಳು. ಹರೀಶ್ ಶೆಟ್ಟಿ ಅವರಿಂದ ಊಟದ ಪ್ರಾಯೋಜನೆ ಒದಗಿಸಿಕೊಟ್ಟ ಸಂಘದ ಉಪಾಧ್ಯಕ್ಷರಾದ ವಸಂತ ಶೆಟ್ಟಿ ಅವರಿಗೆ ತುಂಬು ಮನದ ಧನ್ಯವಾದಗಳು. ಡಾ. ನಿರಂಜನ್ ನಾಯ್ಕ್ ಶ್ರೀ ರಾಧಾಕೃಷ್ಣ, ಕೆ.ಎಸ್. ಮೂರ್ತಿ, ಶ್ರೀ ಡಿವಿಎಸ್ ಮೂರ್ತಿ, ಶ್ರೀ ವಿಶ್ವನಾಥ ಹಾಗೂ ನಮ್ಮ ಕಾರ್ಯಕಾರಿ ಸಮಿತಿಯ ಸದಸ್ಯರಾದ ಶ್ರೀ ಹಣಮಂತ ದೇಶಮುಖ್ ಹೀಗೆ ಎಲ್ಲರಿಂದಲೂ ಧನಸಹಾಯ ಹರಿದು ಬಂದದ್ದಕ್ಕೆ ನಮಗೆ ಅದ್ದೂರಿಯಾಗಿ ಕಾರ್ಯಕ್ರಮ ಆಯೋಜಿಸಲು ಸಾಧ್ಯವಾಯಿತು ಎಂದರು.

ಜೊತೆಗೆ ಅತಿಥಿ ಗಣ್ಯರು ಗುರುಗಾಂವ್ ಕನ್ನಡ ಸಂಘಕ್ಕೆ ಸ್ವಂತ ಕಟ್ಟಡದ ವಿಷಯ ಪ್ರಸ್ತಾಪಿಸುತ್ತಾ ನಮ್ಮ ಸಂಘ ಅಭಿವೃದ್ಧಿಯತ್ತ ಕೊಂಡೊಯ್ಯಲು ನಮ್ಮನ್ನು ಪ್ರೇರೇಪಿಸಿದರು. ಇಷ್ಟೊಂದು ದೊಡ್ಡ ಸಹಯೋಗ, ಸಹಾಯ, ಸಹಕಾರ, ಬೆಂಬಲ, ಪ್ರೋತ್ಸಾಹ ನೀಡಿದ ತಮಗೆಲ್ಲರಿಗೂ ಅನಂತ ಅನಂತ ವಂದನೆಗಳು. ಹಾಗೆಯೇ ನಮ್ಮ ಸಂಘದ ಸಮಸ್ತ ಪದಾಧಿಕಾರಿಗಳು, ಕಾರ್ಯಕಾರಿಣಿ ಸದಸ್ಯರು ಹಾಗೂ ಕಾರ್ಯಕರ್ತರೆಲ್ಲರಿಗೂ ಅನಂತ ಅನಂತ ಧನ್ಯವಾದಗಳು. ಕಾರ್ಯಕ್ರಮದ ಯಶಸ್ಸಿಗೆ ಪ್ರತಿಯೊಬ್ಬ ವ್ಯಕ್ತಿಯು ಕೊಡುಗೆ ನೀಡಿದ್ದಾರೆ. ಮುಂಬರುವ ದಿನಗಳಲ್ಲಿ ನಮ್ಮೆಲ್ಲರ ಒಗ್ಗಟ್ಟು ಹೀಗೆ ಇರಲಿ ಎಂದು ಬಯಸುತ್ತೇವೆ ಎಂದರು.

ಇದೇ ಸಂದರ್ಭದಲ್ಲಿ ದೆಹಲಿ ಕರ್ನಾಟಕ ಸಂಘದ ನೂತನ ಸಮಿತಿಯವರಿಗೂ ಅಭಿನಂದನೆ ಸಲ್ಲಿಸಲಾಯಿತು. ಹಾಗೇಯೇ ಸ್ಥಳೀಯ ಕಲಾವಿದರಿಗೆ ಬಹುಮಾನ ನೀಡುವುದರ ಮೂಲಕ ಕಲಾವಿದರನ್ನು ಪ್ರೋತ್ಸಾಹಿಸಲಾಯಿತು.

ಉಪಾಧ್ಯಕ್ಷರಾದ ಶ್ರೀಮತಿ ಸುನಂದಾ ದರ್ಗಾ ಹಾಗೂ ಸದಸ್ಯರಾದ ಶ್ರೀಮತಿ ವಿನತಾ ಗೌಡ ಅವರು ಸಾಂಸ್ಕೃತಿಕ ಕಾರ್ಯಕ್ರಮಗಳು ನಿರೂಪಿಸಿದರೆ, ಸಭಾ ಕಾರ್ಯಕ್ರಮವನ್ನು ಉಪಾಧ್ಯಕ್ಷರಾದ ಶ್ರೀ ಗೋಪಾಲ ತಲ್ವಾರ್ ಮತ್ತು ಸದಸ್ಯರಾದ ಶ್ರೀ ಚಂದ್ರಶೇಖರ ಅವರು ನಿರೂಪಿಸಿದರು.ಪ್ರಧಾನ ಕಾರ್ಯದರ್ಶಿಯಾದ ಶ್ರೀ ತಿಮ್ಮಪ್ಪ ಜಿ.ಆರ್. ಅವರು ಸ್ವಾಗತಿಸಿದರು, ಶ್ರೀ ಗಿರೀಶ್ ಅವರು ಪಂಚಾಂಗ ಶ್ರವಣ ನಡೆಸಿಕೊಟ್ಟರು. ❑

ವರದಿ

***ಗುರುಗಾಂವ್ ಕನ್ನಡ ಸಂಘ***











# ಹೊರನಾಡಿನಲ್ಲಿ ಭಾಷಾವಾರು ಸಂಸ್ಥೆಗಳು: ಮಮತೆಯ ಸೆಲೆಯೋ ಅಥವಾ ರಾಜಕೀಯದ ಗೂಡೋ?

ಮನುಷ್ಯ ಎಲ್ಲಿಯೇ ಹೋದರೂ ತನ್ನ ಮೂಲವನ್ನು ಮರೆಯಲಾರ. ಬದುಕಿನ ಬಂಡಿ ಸಾಗಿಸಲು, ಉದ್ಯೋಗಕ್ಕಾಗಿ ಸಾವಿರಾರು ಕಿಲೋಮೀಟರ್ ದೂರದ ಪರವೂರುಗಳಿಗೆ ಹೋಗುವುದು ಅನಿವಾರ್ಯ.

ಅದರಲ್ಲೂ ಸುಮಾರು 2500 ಕಿ.ಮೀ ದೂರದ ದೆಹಲಿಯಂತಹ ಮಹಾನಗರಗಳಿಗೆ ಕೆಲಸಕ್ಕಾಗಿ ಬಂದವರಿಗೆ, ತಮ್ಮ ನಾಡು-ನುಡಿಯೆಂಬುದು ಕೇವಲ ನೆನಪಲ್ಲ, ಅದೊಂದು ಭಾವನೆ. ಇಂತಹ ಸಂದರ್ಭದಲ್ಲಿ ಹೊರನಾಡಿನಲ್ಲಿರುವ ಭಾಷಾವಾರು ಸಂಸ್ಥೆಗಳು ಕನ್ನಡಿಗರನ್ನು ಅಥವಾ ಆಯಾ ಭಾಷಿಕರನ್ನು ಒಂದುಗೂಡಿಸುವ ಆಶಾಕಿರಣಗಳಾಗಿ ಕಾಣುತ್ತವೆ.

**ಮನೆಯ ನೆನಪು ಮತ್ತು ಭಾಷೆಯ ಮಮತೆ:** ತನ್ನವರನ್ನು ಬಿಟ್ಟು ಅಪರಿಚಿತರ ನಡುವೆ ಬದುಕುವಾಗ ಮನೆಯ ನೆನಪು ಬರುವುದು ಸಹಜ. ದೆಹಲಿಯಂತಹ ನಗರಗಳಲ್ಲಿ ಲಕ್ಷಾಂತರ ಜನರಿದ್ದರೂ, ಅವರ ಭಾಷೆ, ಸಂಸ್ಕೃತಿ ಬೇರೆಯಾಗಿರುತ್ತದೆ. ಅನ್ಯ ಭಾಷೆಯವರ ಮುಂದೆ ನಮ್ಮ ಮನದ ಇಂಗಿತವನ್ನು ಸಂಪೂರ್ಣವಾಗಿ ವ್ಯಕ್ತಪಡಿಸುವುದು ಕಷ್ಟಸಾಧ್ಯ. ಆದರೆ, ನಮ್ಮವರನ್ನು ಕಂಡಾಗ, ನಮ್ಮದೇ ಭಾಷೆಯಲ್ಲಿ ಮಾತಾಡಿದಾಗ ಸಿಗುವ ಆ ಮಮತೆ ಅಪಾರ. ಅದು ಕೇವಲ ಸಂಭಾಷಣೆಯಲ್ಲ; ಅದೊಂದು ಆತ್ಮೀಯತೆಯ ವಿನಿಮಯ. ನಮ್ಮ ಭಾಷೆಯಲ್ಲಿ ಮಾತನಾಡಿದಾಗ ಸಿಗುವ ತೃಪ್ತಿ, ಒಮ್ಮೆ ಊರಿಗೆ ಹೋಗಿ ಬಂದಷ್ಟೇ ಖುಷಿಯನ್ನು ನೀಡುತ್ತದೆ. ಇದೇ ಕಾರಣಕ್ಕೆ ಹೊರನಾಡಿನಲ್ಲಿ ಭಾಷಾವಾರು ಸಂಸ್ಥೆಗಳು ಬೇಕೆಂದು ನಾವು ಬಯಸುವುದು.

**ಸಂಘ ಸಂಸ್ಥೆಗಳ ಇಂದಿನ ವಾಸ್ತವ:**

ಆದರೆ, ಇಂದು ಹೊರನಾಡಿನ ಅನೇಕ ಸಂಘ ಸಂಸ್ಥೆಗಳ ಪರಿಸ್ಥಿತಿಯನ್ನು ನೋಡಿದರೆ ವಿಷಾದವೆನಿಸುತ್ತದೆ. ಪ್ರೀತಿ ಮತ್ತು ಸಂಸ್ಕೃತಿಯನ್ನು ಹುಡುಕುತ್ತಾ ಬಂದ ಪ್ರಜ್ಞಾವಂತರಿಗೆ ಅಲ್ಲಿ ಹೆಚ್ಚಾಗಿ ಕಾಣಸಿಗುವುದು ಮಿತಿಮೀರಿದ ರಾಜಕೀಯ. ಭಾಷಾ ಪ್ರೇಮದ ಹೆಸರಿನಲ್ಲಿ ಬೆಳೆದು ಹೆಮ್ಮರವಾಗಿರುವ ಈ ಸಂಸ್ಥೆಗಳು ಇಂದು ಅಧಿಕಾರ ಮತ್ತು ಪ್ರತಿಷ್ಠೆಯ ರಾಜಕೀಯದಿಂದ ನಾರುತ್ತಿವೆ. ಮಮತೆಯ ಸೆಲೆಯಾಗಬೇಕಿದ್ದ ಈ ವೇದಿಕೆಗಳು 'ಬೇವಿನಂತಹ' ಕಹಿ ರಾಜಕೀಯದಿಂದ ತುಂಬಿಹೋಗಿವೆ. ಇದು ಸಾಮಾನ್ಯ ಕನ್ನಡಿಗನನ್ನು ಸಂಸ್ಥೆಗಳಿಂದ ದೂರ ತಳ್ಳುತ್ತಿದೆ.

**ನಮಗೆ ಬೇಕಿರುವುದು ಮಮತೆಯ ತಾಣ:**

ನಮಗೆ ಬೇಕಿರುವುದು ಅಧಿಕಾರಕ್ಕಾಗಿ ಕಿತ್ತಾಡುವ ಸಂಸ್ಥೆಗಳಲ್ಲ; ಬದಲಾಗಿ ತಾಯಿಯ ಮಮತೆಯನ್ನು ನೀಡುವಂತಹ ತಾಣಗಳು. ಒಬ್ಬ ಸಾಮಾನ್ಯ ಉದ್ಯೋಗಿ ದಣಿದು ಸಂಘಕ್ಕೆ ಬಂದಾಗ ಅವನಿಗೆ ಬೇಕಿರುವುದು ಸಾಂತ್ವನ ಮತ್ತು ತನ್ನವರ ಪ್ರೀತಿಯೇ ಹೊರತು ಚುನಾವಣೆಯ ಅಬ್ಬರವಲ್ಲ. ಸಂಘ ಸಂಸ್ಥೆಗಳು ಕೇವಲ ಕಾರ್ಯಕ್ರಮಗಳಿಗಷ್ಟೇ ಸೀಮಿತವಾಗದೆ, ಪರವೂರಿನಲ್ಲಿರುವವರಿಗೆ ಒಂದು ಭದ್ರತೆಯ ಭಾವನೆಯನ್ನು ಮೂಡಿಸಬೇಕು.

ಹೊರನಾಡಿನಲ್ಲಿ ಭಾಷಾವಾರು ಸಂಸ್ಥೆಗಳು ಅಸ್ತಿತ್ವದಲ್ಲಿರುವುದು ಅತ್ಯಂತ ಅಗತ್ಯ. ಆದರೆ ಅವು ಕೇವಲ ಕಟ್ಟಡಗಳಾಗದೆ, ಜನರ ಭಾವನೆಗಳಿಗೆ ಸ್ಪಂದಿಸುವ ಜೀವಂತ ಕೇಂದ್ರಗಳಾಗಬೇಕು. ಸಂಘ ಸಂಸ್ಥೆಗಳಲ್ಲಿ ಪ್ರೀತಿಯ ಒರತೆ ಯಾವತ್ತೂ ಬತ್ತದಿರಲಿ. ಅಧಿಕಾರದ ರಾಜಕೀಯ ದೂರವಾಗಿ, ಕೇವಲ ಭಾಷೆ ಮತ್ತು ಸಂಸ್ಕೃತಿಯ ಪ್ರೀತಿ ಅಲ್ಲಿ ರಾರಾಜಿಸಿದಾಗ ಮಾತ್ರ ಹೊರನಾಡಿನ ಪ್ರತಿಯೊಬ್ಬರಿಗೂ ಅದು 'ಮತ್ತೊಂದು ಮನೆ' ಎನಿಸಿಕೊಳ್ಳಲು ಸಾಧ್ಯ.❑

***ಪ್ರಕಾಶ್ ಶೆಟ್ಟಿ ಉಳೆಪಾಡಿ***

ಓದುಗರಲ್ಲಿ.....

ನಿಮ್ಮದೇ ಪತ್ರಿಕೆಯಾದ "ಅಭಿಮತದ"ಲ್ಲಿ ನೀವೂ ಬರೆಯಬಹುದು. ಕತೆ, ಕವನ, ಪ್ರವಾಸ, ನೀವು ಓದಿದ ಪುಸ್ತಕ, ನೋಡಿದ ಸಿನೇಮ, ಬಾಲ್ಯದ ನೆನಪುಗಳು, ಸ್ವಾರಸ್ಯಕರ ಘಟನೆ, ಹಾಸ್ಯ, ದಿಲ್ಲಿ ಅನುಭವಗಳು, ಬೇಸಿಗೆಯ ರಜೆ ಹೇಗಾಯ್ತು?, ಮಕ್ಕಳಿಗಾಗಿ ಕತೆ, ಪ್ರಬಂಧ ಇತ್ಯಾದಿ.

**ತಡವೇಕೆ, ಇಂದೇ ಬರೆದು ಕಳಿಸಿ..**

**Email : dksangha@gmail.com**

***ಸಂಪಾದಕರು***

# ನೆರಳಾಗೆ ಬಂಟನಾಗಿ ಹೊರಟ ನಮ್ಮನೆಂಟ.......

# ದೆಹಲಿಯ ಬಿಸಿಲು

ಬಲ್ಲವರೆ ಬಲ್ಲರು ಬೆಲ್ಲದ ರುಚಿ ಎಂಬುದೊಂದು ನಾಣ್ಣುಡಿ. ಅದು ಅರಿವಾಗಿದ್ದು ಇಂದು ನನಗೆ.

ದೆಹಲಿಯ ಮೇ ತಿಂಗಳ ಸುಡು ಬಿಸಿಲ ಬೇಗೆಯ ಅನುಭವಿಸದ ನಮ್ಮ ಸಂಬಂಧಿಯ ಅವಸ್ಥೆ ನೋಡಿದ ನಂತರ. ನಮ್ಮ ನೆಂಟನಾದ ಪರಿಸರವಾದಿ ಶಿವಮಲ್ಲು ಕಛೇರಿಯ ಕೆಲಸದ ನಿಮಿತ್ತ ದೆಹಲಿಗೆ ಬಂದಿದ್ದರು. ವಾರಾಂತ್ಯಕ್ಕೆ ನಮ್ಮ ಮನೆಗೆ ಬಂದ ಅವರು ಕೆಳ ಮಹಡಿಯಲ್ಲಿರುವ ನಮ್ಮ ಮನೆಯಲ್ಲಿ ಉಳಿದು, ಸುತ್ತ ಮುತ್ತಲಿರುವ ಹಸಿರಿನ ವಾತಾವರಣವಿರುವ ಕಾರಣ ಅಷ್ಟು ಬಿಸಿ ಹವೆಯ ಅನುಭವ ಆಗುವುದಿಲ್ಲ. ಈ ವರ್ಷದ ಬೆಳಗಿನ ಗಾಳಿ ಮತ್ತು ರಾತ್ರಿಯ ವಾತಾವರಣ ತಂಪಾಗಿದ್ದು ಅರಾಮದಾಯಕವಾಗಿದೆ.

ಶುಕ್ರವಾರ ಬಂದ ಇವರು ರಾತ್ರಿ ಹಾಗೆ ಕುಶಲೋಪಚಾರಿ ಮಾತು, ಹಾಡು ಮತ್ತು ಇನ್ನಷ್ಟು ವಿಷಯವನ್ನು ಹರಟುತ್ತ ಕಾಲ ಕಳೆದು ಮಲಗಿ ಮಾರನೆಯ ದಿನ ಮುಂಜಾನೆ ಎದ್ದು ಒಂದೆರಡು ಮೈಲಿ ನಡೆದು ಬಂದು ತಯಾರಾದವರೆ ಬಹಳ ಹುರುಪಿನಿಂದ ಮಾರುಕಟ್ಟೆ ಕಡೆ ಹೋಗಿ ಖರೀದಿ ಮಾಡೋಣ ಎಂದು ನಿಂತೇ ಬಿಟ್ಟರು. ಅಯ್ಯೋ ರಾಮ, ಈ ಉರಿಯುವ ಬಿಸಿಲಿನಲ್ಲಿ ನನಗೆ ಇದ್ಯಾವ ಶಿಕ್ಷೆ ಎಂದು ಮನಸ್ಸಿನಲ್ಲೆ ಬೈದುಕೊಂಡು ನನ್ನ ಸುರಕ್ಷತೆಗೆ ಯೋಜನೆ ಹಾಕಿದೆ.

ಆರ್ಮಿ ಕ್ಯಾಂಟೀನ್‌ನಲ್ಲಿ ಎಲ್ಲಾ ಸಿಗುವುದು ಹೋಗಿ ಬರೋಣ ಎಂದು ಅವರ ಮನ ಒಲಿಸಿದೆ. ಕ್ಯಾಂಟೀನ್ ಹವಾನಿಯಂತ್ರಣ ಇರುವುದರಿಂದ ಬಿಸಿಲಿನಿಂದ ತಪ್ಪಿಸಿಕೊಳ್ಳಬಹುದು ಎಂದು ಯೋಚಿಸಿದೆ. ಆರ್ಮಿ ಕ್ಯಾಂಟೀನ್ ತಲುಪಿದ ನಾವು ಒಳ ಹೊಕ್ಕು ಎರಡು ಸುತ್ತು ಸುತ್ತುವಷ್ಟರಲ್ಲಿ ಕುಳಿತೇ ಬಿಟ್ಟರು ನಮ್ಮ ನೆಂಟರು. ನೀನು ಏನು ಬೇಕೊ ಖರೀದಿ ಮಾಡಿ ಬಾ, ನಾನು ಇಲ್ಲೆ ಕುಳಿತಿರುತ್ತೇನೆ ಎಂದರು. ಆನಂತರ ಮನೆ ಕಡೆಗೆ ನಡೆದು ಬರುವಾಗ ಅಯ್ಯೋ ಇಂತಹ ಬಿಸಿಲಲ್ಲಿ ಹೇಗೆ ಓಡಾಡುವುದು, ಬೆಂಗಳೂರಿನ



ವಾತಾವರಣವೇ ಸ್ವರ್ಗ ಎಂದು ಶುರು ಮಾಡಿದರು. ಉತ್ತರ ಭಾರತದ ಹವಾಗುಣ ಗಂಡಾಂತರ ವಾಯುಮಾಲಿನ್ಯ ಪ್ರದೇಶದಿಂದ ಕೂಡಿದೆ ಎಂದು ಓದಿದ ನೆನಪು ಇಂದು ನಂಬುವಂತೆ ಮಾಡಿತು ಎಂದು ಮನೆ ಸೇರಿ ನಿಟ್ಟುಸಿರು ಬಿಟ್ಟರು.

ದೆಹಲಿಯ ಬಿಸಿಲು ಕಠಿಣ ಅದರಂತೆ ಚಳಿಯು ಕೂಡ ಭೀಕರ. ಉದ್ಯೋಗಕ್ಕಾಗಿ ಬರುವ ನಮ್ಮಂತ ದಕ್ಷಿಣ ಭಾರತೀಯರಿಗೆ ಮೊದ ಮೊದಲು ಅನಿಸುವುದು ಈ ಮಟ್ಟದ ಬಿಸಿಲು ಮತ್ತು ಚಳಿ ಕೂಡ ಇರುವುದು ಪ್ರಥಮ ಬಾರಿಗೆ ಅನುಭವಕ್ಕೆ ಬಂತು. ಇಂತಹ ಪ್ರದೇಶದಲ್ಲಿ ಬದುಕುವ ಅನಿವಾರ್ಯವಾದರು ಏನು? ಎಂದೆನಿಸುತ್ತದೆ. ಆದರೆ ಇಲ್ಲಿನ ವಾತಾವರಣದಲ್ಲೂ ಹೊರಾಂಗಣದಲ್ಲಿ ಸೈಕಲ್ ರಿಕ್ಷಾ ತುಳಿದು, ಅಥವ ಕಟ್ಟಡದ ಕಾಮಗಾರಿಯಲ್ಲಿ ಕೆಲಸ ಮಾಡುವರು, ಉರಿ ಬಿಸಿಲಲ್ಲೂ ರೋಡಿನ ಅಂಚಿನಲ್ಲಿ ಬಿಸಿ ಚಹಾ ಮಾಡುವವ ಹೀಗೆ ಅವರವರ ಬದುಕು ಸಾಗಬೇಕಾದರೆ ಬಡಿದಾಡಲೆಬೇಕು. ವಾತಾವರಣಕ್ಕೆ ತಕ್ಕ ಆಹಾರ, ಉಡುಗೆ ತೊಡುಗೆ, ಜೀವನ ಶೈಲಿಗೆ ಒಗ್ಗಿದರೆ ಬದುಕು ಸುಗಮ.



ಈ ಸಂದರ್ಭದಲ್ಲಿ ನಮ್ಮ ಉತ್ತರ ಭಾರತದ ಹವಾಗುಣಕ್ಕೆ ಹೊಂದುವ ಕವಿ ಕೆ.ಎಸ್. ನರಸಿಂಹಸ್ವಾಮಿ ಅವರ ಕವನದ ಕೆಲವು ಸಾಲುಗಳು ಸೂಕ್ತ ಅನಿಸಬಹುದು.

ಕೆ.ಎಸ್. ನರಸಿಂಹಸ್ವಾಮಿ ಕವನ

ಚಳಿಗಾಲ ಬಂದಾಗ, 'ಎಷ್ಟು ಚಳಿ' ಎಂದರು,
ಬಂತಲ್ಲ ಬೇಸಿಗೆ, 'ಕೆಟ್ಟ ಬಿಸಿಲೆಂ'ದರು,
ಮಳೆ ಬಿತ್ತೊ, 'ಬಿಡದಲ್ಲ ಶನಿ !' ಎಂಬ ಟೀಕೆ,
ಇವರು ಮೆಚ್ಚುವ ವಸ್ತು ಇಲ್ಲಿಲ್ಲ, ಜೋಕೆ!

ಚಿಗುರ ಚಿನ್ನದ ನಡುವೆ ಹೂವ ಬಯಸುವರು,
ಹೂಗಳ ಕಾಲದಲಿ ಹಣ್ಣ ಹೊಗಳುವರು,
'ಹಣ್ಣಿನ ಗಾತ್ರ ಪೀಚು' ಎಂದಿವರ ಟೀಕೆ,
ಇವರು ಮೆಚ್ಚುವ ವಸ್ತು ಇಲ್ಲಿಲ್ಲ, ಜೋಕೆ !

ನಿಂತರೆ ಕೇಳುವರು, ನೀನೇಕೆ ನಿಂತೆ?
ಮಲಗಿದರೆ ಗೊಣಗುವರು, ನಿನಗಿಲ್ಲ ಚಿಂತೆ!
ಓಡಿದರೆ ಬೆನ್ನ ಹಿಂದೆಯೇ ಇವರ ಟೀಕೆ,
ಇವರು ಮೆಚ್ಚುವ ವಸ್ತು ಇಲ್ಲಿಲ್ಲ, ಜೋಕೆ !

ಓದಿದರೆ ಹೇಳುವರು, ಮತ್ತೊಮ್ಮೆ ಬರೆಯೊ!
ಬರೆದಿಡಲು ಬೆದಕುವರು, ಬರವಣಿಗೆ ಸರಿಯೊ?
ಇವರ ಬಯಕೆಗಳೇನೋ ಇವರದೇ ಟೀಕೆ,
ಇವರು ಮೆಚ್ಚುವ ವಸ್ತು ಇಲ್ಲಿಲ್ಲ ಜೋಕೆ !!!

***ಹರಿಪ್ರಿಯಾ ಎಸ್.***

# ವಿಶ್ವದ ಉದ್ಧಾರಕ್ಕೆ ಬಸವ ತತ್ವದ ಅಗತ್ಯವಿದೆ- ಕಾಶಿನಾಥ ಬಿರಾದಾರ್



ಸಮಾಜದಲ್ಲಿದ್ದ ಓರೆಕೋರೆಗಳನ್ನು ತಿದ್ದಿದ ಬಸವಣ್ಣನವರ ತತ್ವ ಆದರ್ಶಗಳು ವಿಶ್ವದಗಲದಲ್ಲಿ ನೆಲೆ ನಿಂತಿವೆ ಎಂಬುದು ಕನ್ನಡಿಗರಾದ ನಮಗೆ ಅಭಿಮಾನದ ವಿಚಾರ. ವಿಶ್ವದ ಉದ್ಧಾರಕ್ಕೆ ಬಸವ ತತ್ವದ ಅಗತ್ಯವಿದೆ ಎಂದು ದೆಹಲಿ ಕನ್ನಡ ಶಿಕ್ಷಣ ಸಂಸ್ಥೆಯ ಗೌರವ ಖಜಾಂಚಿ, ಪ್ರಭಾರ ಗೌರವ ಕಾರ್ಯದರ್ಶಿ ಕಾಶಿನಾಥ ಬಿರಾದಾರ ಹೇಳಿದರು.

ದೆಹಲಿ ಕನ್ನಡ ಹಿರಿಯ ಮಾಧ್ಯಮಿಕ ಶಾಲೆಯಲ್ಲಿ ದಿನಾಂಕ 20.04.2026ರಂದು ದೆಹಲಿ ಕನ್ನಡ ಶಿಕ್ಷಣ ಸಂಸ್ಥೆಯ ಜಿ.ಪಿ. ರಾಜರತ್ನಂ ಸಭಾಂಗಣದಲ್ಲಿ ಆಯೋಜಿಸಲಾದ ಬಸವ ಜಯಂತಿ ಕಾರ್ಯಕ್ರಮದಲ್ಲಿ ಬಸವಣ್ಣನವರ ಭಾವಚಿತ್ರಕ್ಕೆ ಪುಷ್ಪನಮನವನ್ನು ಸಲ್ಲಿಸಿ ಮಾತನಾಡಿದ ಅವರು ದುಡಿಯಬೇಕು ಹಂಚಿ ತಿನ್ನಬೇಕು ಎನ್ನುವುದೇ ವಚನಕಾರರ ಆಶಯವಾಗಿತ್ತು. ಬಸವಣ್ಣನವರನ್ನು ಸಮಸಮಾಜದ ಹರಿಕಾರ, ಕಾಯಕ ಮತ್ತು ದಾಸೋಹದ ಹರಿಕಾರ ಮತ್ತು ಆತ್ಮೋದ್ಧಾರಕದ ಹರಿಕಾರನೆಂದು ಗುರುತಿಸುತ್ತಾರೆ. ಆಡಂಬರದ ಭಕ್ತಿಯನ್ನು ನಿರಾಕರಿಸಿ ನಿರ್ಮಲವಾದ ಭಕ್ತಿಯನ್ನು ಪ್ರತಿಪಾದಿಸಿದ ಬಸವಣ್ಣನವರ ಜೀವನ, ವಚನಗಳು ನಮಗೆಲ್ಲರಿಗೂ ದಾರಿದೀಪವಾಗಬೇಕು ಎಂದು ಹೇಳಿದರು.

ಅಧ್ಯಕ್ಷತೆಯನ್ನು ವಹಿಸಿ ಮಾತನಾಡಿದ ದೆಹಲಿ ಕನ್ನಡ ಹಿರಿಯ ಮಾಧ್ಯಮಿಕ ಶಾಲೆಯ ಉಪಪ್ರಾಂಶುಪಾಲೆ ಶ್ರೀಮತಿ ಪ್ರೇಮಲತಾ ಬಿ. ಅವರು ಮಾತನಾಡಿ ಬಸವಣ್ಣನವರು ವರ್ಣಾಶ್ರಮದಲ್ಲಿ ನಲುಗಿದ್ದ ಸಮಾಜವನ್ನು ಉದ್ಧರಿಸಿದ ಮಹಾ ಮಾನವತಾವಾದಿ. ಸಮಾಜದ ಕಟ್ಟಕಡೆಯಲ್ಲಿ ನಿಲ್ಲಿಸಿದ್ದ ಕೆಳವರ್ಗವನ್ನು ಮೇಲೆತ್ತಲು ತಮ್ಮ ಶಕ್ತಿ ಮೀರಿ ಪ್ರಯತ್ನಿಸಿದವರು. ಮಹಿಳೆಯರ ಸ್ಥಾನಮಾನ, ಸಮಾನತೆಯ ಧ್ವನಿ ಎತ್ತಿ ಮಹಿಳೆಯರ ಸ್ವಾತಂತ್ರ್ಯಕ್ಕೆ ಒತ್ತು ನೀಡಿದವರು. ಜಾತಿಯ ಹಾಗೂ ಮಹಿಳೆಯರ ತಾರತಮ್ಯವಿರುವಂತಹ ಆ ಕಾಲದಲ್ಲಿ ಬಸವಣ್ಣನವರ ವಚನಗಳು ಕ್ರಾಂತಿಕಾರಿ ಹೆಜ್ಜೆಗಳನಿಟ್ಟವು. ಕಾಯಕವೇ ಕೈಲಾಸ ಎನ್ನುವ ಬಸವಣ್ಣನವರ ತತ್ವವನ್ನು ವಿದ್ಯಾರ್ಥಿಗಳು ಮೈಗೂಡಿಸಿಕೊಂಡರೆ ಕಲಿಕೆಯಲ್ಲಿ ಶ್ರೇಯಸ್ಸನ್ನು ಪಡೆಯಬಹುದು ಎಂದು ವಿದ್ಯಾರ್ಥಿಗಳಿಗೆ ಕಿವಿಮಾತು ಹೇಳಿದರು.

ಕು. ವೈಷ್ಣವಿ, ಕು. ನಂದಿತಾ ಉಭಾಳೆ, ಕು. ಕಾರ್ತಿಕ್ ಕುಮಾರ್, ಕು. ಜೈನಬ್, ಕು. ಬುದ್ಧನಾ ಸಂಘಮಿತ್ರ, ಕು. ನಿಷ್ಠಾ ಪೂಜಾರಿ, ಕು. ಅಂಕಿತಾ ಲದ್ದೆ ವಚನ ಗಾಯನವನ್ನು ಪ್ರಸ್ತುತ ಪಡಿಸಿದರು. ದೆಹಲಿ ಕನ್ನಡ ಶಿಕ್ಷಣ ಸಂಸ್ಥೆಯ ಆಡಳಿತ ಸಮಿತಿ ಸದಸ್ಯ ಹರಿಪ್ರಿಯಾ ಎಸ್., ಶಿಕ್ಷಕಿ ಶ್ರೀಮತಿ ಲಾವಣ್ಯ ಎಂ. ಎಸ್., ಕನ್ನಡ ಪೋಷಕರು, ವಿದ್ಯಾರ್ಥಿಗಳು ಉಪಸ್ಥಿತರಿದ್ದರು. ಉಪನ್ಯಾಸಕ ನಾಗರಾಜ ಎಂ. ಸ್ವಾಗತಿಸಿದರು. ವಿಜ್ಞಾನ ಶಿಕ್ಷಕ ಎಚ್. ಎಸ್. ತೇಲಿ ವಂದಿಸಿದರು. ಕನ್ನಡ ಶಿಕ್ಷಕ ಅರವಿಂದ ಬಿಜೈ ಕಾರ್ಯಕ್ರಮ ನಿರೂಪಿಸಿದರು.❑

**ಅರವಿಂದ ಬಿಜೈ**

# ಸಂಸತ್ ಭವನದಲ್ಲಿ ಕನ್ನಡ ವಿದ್ಯಾರ್ಥಿಗಳಿಂದ ವಚನ ಗಾಯನ



ನವದೆಹಲಿಯ ಸಂಸತ್ ಭವನದ ಆವರಣದಲ್ಲಿ ದಿನಾಂಕ 20.04.2026ರಂದು ವಿಶ್ವಗುರು ಬಸವಣ್ಣನವರ 893ನೇ ಜಯಂತಿಯನ್ನು ಆಚರಿಸಲಾಯಿತು. ಸಂಸತ್ ಭವನದ ಪ್ರೇರಣಾಸ್ಥಳದಲ್ಲಿರುವ ಬಸವೇಶ್ವರರ ಪ್ರತಿಮೆಗೆ ಗಣ್ಯರು ಪುಷ್ಪನಮನ ಸಲ್ಲಿಸಿ ಗೌರವ ಸಲ್ಲಿಸಿದರು.

ಕಾರ್ಯಕ್ರಮದಲ್ಲಿ ದೆಹಲಿ ಕನ್ನಡ ಹಿರಿಯ ಮಾಧ್ಯಮಿಕ ಶಾಲೆಯ ವಿದ್ಯಾರ್ಥಿಗಳು ಭಾಗವಹಿಸಿ ಬಸವಣ್ಣನವರ ವಚನವನ್ನು ಸುಮಧುರವಾಗಿ ಪ್ರಸ್ತುತಪಡಿಸಿದರು. ಬಳಿಕ ಸಂಸತ್ ಭವನವನ್ನು ವೀಕ್ಷಿಸಿದರು. ದೆಹಲಿ ಕನ್ನಡ ಶಿಕ್ಷಣ ಸಂಸ್ಥೆಯ ಆಡಳಿತ ಸಮಿತಿ ಸದಸ್ಯರುಗಳಾದ ಗಿರೀಶ್ ಎಸ್., ಡಾ. ಅಶೋಕ್ ಗೋನಾಳ್, ದೆಹಲಿ ಕನ್ನಡ ಹಿರಿಯ ಮಾಧ್ಯಮಿಕ ಶಾಲೆಯ ಗೌರವ ವ್ಯವಸ್ಥಾಪಕ ಉಮೇಶ್ ಬಿ. ಆರ್., ಉಪನ್ಯಾಸಕ ನಾಗರಾಜ ಎಂ., ಶಿಕ್ಷಕರುಗಳಾದ ಅರವಿಂದ ಬಿಜೈ, ಎಚ್.ಎಸ್. ತೇಲಿ, ಶ್ರೀಮತಿ ಶಿಲ್ಪಾ ಹಲ್ಕರ್, ಗೋಪಾಲಕೃಷ್ಣ, ಕನ್ನಡ ಪೋಷಕರು ಉಪಸ್ಥಿತರಿದ್ದರು.

# ಅಂಬೇಡ್ಕರ್ ಅವರ ಚಿಂತನೆ, ಪ್ರಖರ ವೈಚಾರಿಕತೆಯೇ ಭರವಸೆಯ ದೀಪಗಳಾಗಿವೆ-ಆರ್. ರೇಣುಕುಮಾರ್



ಅಂಬೇಡ್ಕರ್ ಅವರ ಚಿಂತನೆ, ಪ್ರಖರ ವೈಚಾರಿಕತೆಯೇ ಇಂದಿಗೂ ಸಮಾಜದ ಭರವಸೆಯ ದೀಪಗಳಾಗಿವೆ. ಮಾನವರಾಗಿ ಬೆಳೆದು ವಿಶ್ವಮಾನವರಾಗಿ ಸಮಾನತೆಗೆ ಮಹತ್ವ ಕೊಟ್ಟ ಹರಿಕಾರ ಅಂಬೇಡ್ಕರ್ ಎಂದು ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷ ಆರ್. ರೇಣುಕುಮಾರ್ ಹೇಳಿದರು.

ಡಾ. ಬಿ.ಆರ್. ಅಂಬೇಡ್ಕರ್ ಅವರ 135ನೇ ಜನ್ಮದಿನದ ಪ್ರಯುಕ್ತ ಡಾ. ಬಿ.ಆರ್. ಅಂಬೇಡ್ಕರ್ ಸ್ಫೂರ್ತಿ ಕಲ್ಚರ್ ಫೌಂಡೇಶನ್ ನವದೆಹಲಿಯು ದೆಹಲಿ ಕರ್ನಾಟಕ ಸಂಘದ ವಿಚಾರ ಸಂಕಿರಣದಲ್ಲಿ ಆಯೋಜಿಸಿದ ಅಂಬೇಡ್ಕರ್ ಜಯಂತಿ ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿ ಇವರು ಮಾತನಾಡಿದರು.

ಅಂಬೇಡ್ಕರ್ ಅವರು ಭಾರತದ ಇತಿಹಾಸದ ಶ್ರೇಷ್ಠ ನಾಯಕರಲ್ಲಿ ಒಬ್ಬರು. ಹೋರಾಟಗಾರ, ವಿದ್ವಾಂಸ, ಸಂವಿಧಾನ ಶಿಲ್ಪಿ, ನೇತಾರ, ಅರ್ಥಶಾಸ್ತ್ರಜ್ಞ ಹೀಗೆ ಹಲವು ಮುಖಗಳು ಅಂಬೇಡ್ಕರ್ ಅವರಿಗಿದೆ. ಭಾರತೀಯ ಕಾನೂನು ಮತ್ತು ಶಿಕ್ಷಣದಲ್ಲಿ ಸಾಕಷ್ಟು ಕೊಡುಗೆ ನೀಡಿದ್ದಾರೆ. ಅವರ ಚಿಂತನೆಗಳು ಮತ್ತು ಅವರು ನೀಡಿದ ಸಂವಿಧಾನವು ಪ್ರತಿಯೊಬ್ಬರಲ್ಲಿ ತಮ್ಮ ಹಕ್ಕುಗಳ ಕುರಿತು ಪ್ರಜ್ಞೆಯನ್ನು ಮೂಡಿಸಿದೆ. ಶಿಕ್ಷಣ ನೀತಿಯಲ್ಲಿ ಸಮಾನತೆ ಸೌಹಾರ್ದತೆಗೆ ಹೆಚ್ಚು ಆದ್ಯತೆ ನೀಡಬೇಕು. ಶಿಕ್ಷಣವು ಸುಲಭವಾಗಿ ಪ್ರತಿಯೊಬ್ಬರಿಗೆ ದೊರಕುವಂತಾಗಬೇಕು ಎಂಬುದು ಅವರ ಆಶಯವಾಗಿತ್ತು ಎಂದು ಹೇಳಿದರು.

ಗೌರವ ಉಪಸ್ಥಿತರಿದ್ದ ಕರ್ನಾಟಕ ಭವನದ ಅಪರ ಉಪನಿವಾಸಿ ಆಯುಕ್ತ ಮೋಹನ್ ಕುಮಾರ್ ಅವರು ಮಾತನಾಡಿ ಬಾಲ್ಯದ ದಿನಗಳಿಂದಲೇ ಅಂಬೇಡ್ಕರ್ ಅವರು ಅನುಭವಿಸಿದ ಅಸ್ಪೃಶ್ಯತೆಯ ನೋವು, ಅವಮಾನಗಳೇ ದಲಿತರ ಕುರಿತಾಗಿ ಹಾಗೂ ಸಾಮಾಜಿಕ ಚಿಂತನೆಗೆ ಅವರನ್ನು ಮುಖ ಮಾಡುವಂತೆ ಪ್ರೇರೇಪಿಸಿದವು. ಸಮಾಜದಲ್ಲಿರುವ ತಾರತಮ್ಯತೆ, ಭೇದಭಾವಗಳು ಮನುಷ್ಯರೊಳಗಿನ ಮಾನವೀಯತೆಯನ್ನು ಮರೆಮಾಚುತ್ತಿದೆ ಎಂಬುದನ್ನು ಅರಿತು ಸಮಾಜ ಸುಧಾರಣೆಗಾಗಿ ತಮ್ಮ ಜೀವನವನ್ನೇ ಮುಡಿಪಾಗಿಟ್ಟ ಶೋಷಿತರ ದನಿಯಾದ ಅಂಬೇಡ್ಕರ್ ಅವರನ್ನು ನಾವು ನಿತ್ಯ ನೆನೆಯಲೇಬೇಕು ಎಂದು ಹೇಳಿದರು.

ದೆಹಲಿ ಕರ್ನಾಟಕ ಸಂಘದ ಕಾರ್ಯಕಾರಿ ಸಮಿತಿ ಸದಸ್ಯೆ ಶ್ರೀಮತಿ ಪೂಜಾ ಪಿ. ರಾವ್, ದೆಹಲಿ ಕನ್ನಡ ಹಿರಿಯ ಮಾಧ್ಯಮಿಕ ಶಾಲೆಯ ಗೌರವ ವ್ಯವಸ್ಥಾಪಕ ಬಿ.ಆರ್. ಉಮೇಶ್, ಆಡಳಿತ ಸಮಿತಿ ಸದಸ್ಯ ಹರಿಪ್ರಿಯಾ ಎಸ್., ಲೋಕಸಭೆಯ ಜಂಟಿ ನಿರ್ದೇಶಕ ಎನ್.ಪಿ. ಚಂದ್ರಶೇಖರ್, ಡಾ. ಅಶ್ವಿನಿ ಕಾರ್ಯಕ್ರಮದ ಕುರಿತು ಶುಭ ಹಾರೈಸಿ ಮಾತನಾಡಿದರು. ಶಿಕ್ಷಕ ಅರವಿಂದ ಬಿಜ್ಜೆ ಅಂಬೇಡ್ಕರ್ ಕುರಿತಾದ ಸ್ವರಚಿತ ಕವಿತೆಯನ್ನು ಹಾಡಿನ ಮೂಲಕ ಪ್ರಸ್ತುತಪಡಿಸಿದರು.

ದೆಹಲಿ ಕರ್ನಾಟಕ ಸಂಘದ ಪ್ರಧಾನ ಕಾರ್ಯದರ್ಶಿ ರಾಧಾಕೃಷ್ಣ, ಜಂಟಿ ಕಾರ್ಯದರ್ಶಿ ಅಶ್ವಿನಿ ಬಿ.ಎಸ್., ಕಾರ್ಯಕಾರಿ ಸಮಿತಿ ಸದಸ್ಯರುಗಳಾದ ಶಿವಪ್ಪ ಎಂ., ನಾರಾಯಣ ಬಿ., ದೆಹಲಿ ತುಳುಸಿರಿಯ ಉಪಾಧ್ಯಕ್ಷ ಪ್ರದೀಪ್ ರಾವ್ ಹಾಗೂ ಗಣ್ಯರು ಉಪಸ್ಥಿತರಿದ್ದರು. ಡಾ. ಬಿ.ಆರ್. ಅಂಬೇಡ್ಕರ್ ಸ್ಫೂರ್ತಿ ಕಲ್ಚರ್ ಫೌಂಡೇಶನ್ ನವದೆಹಲಿ ಇದರ ಅಧ್ಯಕ್ಷ ಬಿ.ಕೆ. ಬಸವರಾಜ್ ಸ್ವಾಗತಿಸಿದರು. ಕಾರ್ಯದರ್ಶಿ ಎಸ್. ಕುಮಾರ್ ಕಾರ್ಯಕ್ರಮವನ್ನು ನಿರೂಪಿಸಿ ವಂದಿಸಿದರು. ❑

# ದೆಹಲಿ ಕನ್ನಡಿಗ ಬಾ. ಸಾಮಗರಿಗೆ ಹುಟ್ಟೂರಲ್ಲಿ ಅದ್ದೂರಿ ಸನ್ಮಾನ



'ದೆಹಲಿ ಕನ್ನಡಿಗ' ಎಂದೇ ಪ್ರಸಿದ್ಧರಾಗಿರುವ ದೆಹಲಿ ಕನ್ನಡಿಗ ಪತ್ರಿಕೆ ಸಂಪಾದಕ ಬಾ. ಸಾಮಗ ಅವರನ್ನು ಹೊರನಾಡ ಕನ್ನಡಾಭಿವೃದ್ಧಿಗೆ ಅಪ್ರತಿಮ ಸೇವೆ ಸಲ್ಲಿಸಿದ್ದನ್ನು ಪರಿಗಣಿಸಿ 70 ವರ್ಷ ಪೂರೈಸಿದ ಶುಭ ಸಂದರ್ಭದಲ್ಲಿ ಹುಟ್ಟೂರಾದ ಉಡುಪಿ ಸಮೀಪದ ಕೊಡವೂರಿನಲ್ಲಿ ಏಪ್ರಿಲ್ 14 ರಂದು ಅದ್ದೂರಿಯಾಗಿ ಸನ್ಮಾನಿಸಲಾಯಿತು. ಇದರಲ್ಲಿ ಸಾಹಿತಿಗಳು, ಕಲಾವಿದರು, ಪತ್ರಿಕೋದ್ಯಮಿಗಳು, ಸಾಮಾಜಿಕ-ಧಾರ್ಮಿಕ ಮುಖಂಡರುಗಳು, ಸಂಘ ಸಂಸ್ಥೆಗಳ ಪ್ರತಿನಿಧಿಗಳು ಭಾಗವಹಿಸಿದ್ದರಲ್ಲದೆ ಸಾಮಗರ ಸಾಧನೆಗಳನ್ನು ವಿವರಿಸಿ ಅಭಿನಂದಿಸಿದರು.

ಸಾಮಗ ಅವರು ದಿಲ್ಲಿಯಲ್ಲಿ ದೆಹಲಿ ಕನ್ನಡಿಗ ಕನ್ನಡ ಮಾಸಪತ್ರಿಕೆ ನಡೆಸಿ 31 ರಾಷ್ಟ್ರೀಯ ಕನ್ನಡ ಸಮ್ಮೇಳನಗಳನ್ನೂ, ಕನ್ಯಾಕುಮಾರಿಯಿಂದ ಕಾಠ್ಮಂಡುವರೆಗೆ ವಿವಿಧ ನಗರಗಳಲ್ಲಿ 10 ಅಖಿಲ ಭಾರತ ಕನ್ನಡ ಸಾಹಿತ್ಯ ಸಂಸ್ಕೃತಿ ಸಮ್ಮೇಳನಗಳನ್ನು ಯಶಸ್ವಿಯಾಗಿ ನಡೆಸಿದ್ದಾರೆ. 'ತುಳುವೆರ್' ಹೆಸರಿನ ತುಳು ಮಾಸ ಪತ್ರಿಕೆಯನ್ನು 30 ವರ್ಷಗಳ ಕಾಲ ನಡೆಸಿರುವರಲ್ಲದೆ 5 ಅಖಿಲ ಭಾರತ ತುಳು ಸಮ್ಮೇಳನಗಳನ್ನು ಸಂಘಟಿಸಿದ್ದಾರೆ. 15 ಕನ್ನಡ, 7 ತುಳು ಪುಸ್ತಕಗಳನ್ನು ಬರೆದು ಪ್ರಕಟಿಸಿರುವ ಇವರು ಹಲವಾರು ಪ್ರತಿಷ್ಠಿತ ಪ್ರಶಸ್ತಿಗಳನ್ನು ಪಡೆದಿರುತ್ತಾರೆ.

ಚಿತ್ರದಲ್ಲಿ : ಸನ್ಮಾನಿತರಾದ ಬಾ. ಸಾಮಗ, ಶ್ರೀನಿವಾಸ ಉಪಾಧ್ಯ, ಪ್ರವೀಣ್ ಬಲ್ಲಾಳ್, ಸಂದೀಪ ಮಂಜ, ಪ್ರೊ. ಎಂ.ಎಲ್. ಸಾಮಗ, ಪಿ. ಗುರುರಾಜ ರಾವ್, ಗೋವಿಂದ ಐತಾಳ್ ಅವರಿದ್ದಾರೆ. ❑

# ಡಾ. ರಾಜಕುಮಾರ್ ನೆನಪಿನ ಗಾನಮಾಲೆ.
# ಡಾ.ರಾಜ್ ಜನ್ಮೋತ್ಸವ ಆಚರಿಸಿದ ಸ್ವರಾಂಜಲಿ




ದಿನಾಂಕ 24.04.2026 ಶುಕ್ರವಾರ ಸಂಜೆ 6 ಗಂಟೆಗೆ ದೆಹಲಿ ಕರ್ನಾಟಕ ಸಂಘದ ವಿಚಾರ ಸಂಕಿರಣ ಕೊಠಡಿಯಲ್ಲಿ ದೆಹಲಿಯ ಸ್ವರಾಂಜಲಿ ಕಲಾವಿದರಿಂದ ಡಾ. ರಾಜಕುಮಾರ್ ಅವರ ಆಯ್ದ ಹಾಡುಗಳನ್ನು ಹಾಡುವ ಮೂಲಕ ಡಾ. ರಾಜಕುಮಾರ್ ರವರ ಜನ್ಮದಿನಾಚರಣೆಯನ್ನು ಆಚರಿಸಲಾಯಿತು. ದೆಹಲಿ ಕರ್ನಾಟಕ ಸಂಘದ ಸಹಯೋಗದಿಂದ ನಡೆದ ಕಾರ್ಯಕ್ರಮದಲ್ಲಿ ಕೊಠಡಿ ಪ್ರೇಕ್ಷಕರಿಂದ ಭರ್ತಿಯಾಗಿತ್ತು.

ಮೊದಲಿಗೆ ಕಾಪಾಡು ಶ್ರೀ ಸತ್ಯನಾರಾಯಣ ಪ್ರಾರ್ಥನೆ ಹಾಡಿಗೆ ಸುಮಾರು 15 ಕಲಾವಿದರು ಧ್ವನಿಯಾಗಿ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು. ದಾರಿ ತಪ್ಪಿದ ಮಗ ಚಿತ್ರದ ಈ ಪ್ರಾರ್ಥನೆ ಗೀತೆ ನೆರೆದಿದ್ದವರನ್ನು ಮಂತ್ರ-ಮುಗ್ದ-ಗೊಳಿಸಿತು.

ದೆಹಲಿ ಕರ್ನಾಟಕ ಸಂಘದ ನೂತನ ಅಧ್ಯಕ್ಷರಾದ ಶ್ರೀ ರೇಣುಕುಮಾರ್, ಉಪಾಧ್ಯಕ್ಷ ಶ್ರೀ ವಸಂತ ಶೆಟ್ಟಿ ಬೆಳ್ಳಾರೆ, ಪ್ರಧಾನ ಕಾರ್ಯದರ್ಶಿ ಶ್ರೀ ರಾಧಾಕೃಷ್ಣ, ಖಜಾಂಚಿ ಶ್ರೀಮತಿ ಆಶಾಲತ ಎಂ., ಜಂಟಿ ಕಾರ್ಯದರ್ಶಿ ಶ್ರೀಮತಿ ಅಶ್ವಿನಿ ಬಿ.ಎಸ್, ಕಾರ್ಯಕಾರಿ ಸಮಿತಿಯ ಸದಸ್ಯರುಗಳಾದ ಶ್ರೀಮತಿ ಪೂಜಾ ಪಿ. ರಾವ್, ಶ್ರೀಮತಿ ಶುಭಾ ದೇವಿಪ್ರಸಾದ್ ಮತ್ತು ಸ್ವರಾಂಜಲಿಯ ಪ್ರಧಾನ ಕಾರ್ಯದರ್ಶಿ ಶ್ರೀ ಹರಿಪ್ರಿಯಾ ಎಸ್ ರವರು ದೀಪ ಬೆಳಗಿಸುವುದರ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು.

ಸ್ವರಾಂಜಲಿಯ ಶ್ರೀ ಗಿರೀಶ್. ಎಸ್ ಅವರು ಕಾರ್ಯಕ್ರಮಕ್ಕೆ ಬಂದಿದ್ದ ಗಣ್ಯರು ಹಾಗೂ ಪ್ರೇಕ್ಷಕರನ್ನು ಸ್ವಾಗತಿಸಿದರು. ಕಾರ್ಯಕ್ರಮ ಕುರಿತು ಪ್ರಾಸ್ತಾವಿಕ ನುಡಿಗಳನ್ನು ನುಡಿದ ಶ್ರೀ ಹರಿಪ್ರಿಯ .ಎಸ್ ರವರು 1998 ರಲ್ಲಿ ಡಾ. ರಾಜಕುಮಾರ್ ಅವರ ಭೇಟಿಯ ಬಗ್ಗೆ ನೆನಪಿಸಿದರು. ದೆಹಲಿ ಕರ್ನಾಟಕ ಸಂಘದ ಅಂದಿನ ಅಧ್ಯಕ್ಷರಾಗಿದ್ದ ದಿ. ಕೆ.ಆರ್. ನಾಗರಾಜ ಅವರು ಕಟ್ಟಡದ ದೇಣಿಗೆಗಾಗಿ ಫಂಡ್ ರೈಸಿಂಗ್ ಇವೆಂಟ್ ರೂಪದಲ್ಲಿ ಡಾ. ರಾಜಕುಮಾರ್ ಸಂಗೀತ ಸಂಜೆಯನ್ನು ಸಿರಿ ಫೋರ್ಟ್ ಆಡಿಟೋರಿಯಂನಲ್ಲಿ ಏರ್ಪಡಿಸಲಾಗಿತ್ತು, ಮತ್ತು ಆ ಕಾರ್ಯಕ್ರಮದ ಸಂಚಾಲಕರಾಗಿ ಇಂದಿನ ಪ್ರಧಾನ ಕಾರ್ಯದರ್ಶಿಗಳಾದ ರಾಧಾಕೃಷ್ಣ ಉಸ್ತುವಾರಿ ವಹಿಸಿದ್ದರು, ಡಾ. ವೆಂಕಟಾಚಲ ಹೆಗಡೆ, ಶ್ರೀ ವಸಂತ ಶೆಟ್ಟಿ ಬೆಳ್ಳಾರೆ, ಶ್ರೀಹರಿ ಶೇಖರ್ ಮತ್ತು ರೇಣುಕುಮಾರ್ ಆರ್. ಕೂಡ ಆ ಸಮಯದಲ್ಲಿದ್ದರು ಎಂದು ತಿಳಿಸಿದರು. ದೆಹಲಿ ಕರ್ನಾಟಕ ಸಂಘ ಮತ್ತು ಡಾ. ರಾಜಕುಮಾರ್ ಅವರ ನೆಂಟನ್ನು ಚುಟುಕಾಗಿ ವಿವರಿಸಿದರು.

ಇದೇ ಸಂದರ್ಭದಲ್ಲಿ ಇತ್ತೀಚಿಗೆ ನಡೆದ ಚುನಾವಣೆಯಲ್ಲಿ ಜನಮತದಿಂದ ದೆಹಲಿ ಕರ್ನಾಟಕ ಸಂಘಕ್ಕೆ ಆಯ್ಕೆಯಾದ ನೂತನ ಆಡಳಿತ ಮಂಡಳಿಯ ಎಲ್ಲರನ್ನು ಅಭಿನಂದಿಸಲಾಯಿತು. ಈ ಸಂಧರ್ಭದಲ್ಲಿ ಮಾತನಾಡಿದ ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷರಾದ ಶ್ರೀ ರೇಣುಕುಮಾರ್ ಡಾ. ರಾಜಕುಮಾರ್ ಯುಗದಲ್ಲಿ ಹುಟ್ಟಿದ ನಾವೆ ಧನ್ಯರು, ಅವರ ಪಾತ್ರ ಮತ್ತು ಬದುಕಿದ ರೀತಿ ನಮಗೆ ಆದರ್ಶ ಮತ್ತು ಲೋಕ ಕಂಡ ಅದ್ಭುತ ನಟ ಮತ್ತು ಉತ್ತಮ ಪುರುಷ ಎಂದು ಡಾ. ರಾಜಕುಮಾರ್ ಬಗ್ಗೆ ನುಡಿದರು. ಮತ್ತು ಇಂತಹ ಯುಗದ ನಾಯಕನ ಜನ್ಮದಿನಾಚರಣೆಯನ್ನು ಹಮ್ಮಿಕೊಂಡಿರುವ ಸ್ವರಾಂಜಲಿ ತಂಡವನ್ನು ಶ್ಲಾಘಿಸಿದರು. ಮತ್ತು ಸ್ಥಳೀಯ ಕಲಾವಿದರು ಯಾವುದೇ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಮಾಡಿದರೆ ದೆಹಲಿ ಕರ್ನಾಟಕ ಸಂಘ ನಿಮ್ಮ ಜೊತೆ ನಾವು ಸಂಪೂರ್ಣ ಸಹಕಾರ ನೀಡುವುದಾಗಿ ಅಧ್ಯಕ್ಷರು ಭರವಸೆಯ ನುಡಿಯನ್ನು ನುಡಿದರು. ಇದೇ ಸಂದರ್ಭದಲ್ಲಿ ಪ್ರಧಾನ ಕಾರ್ಯದರ್ಶಿ ಶ್ರೀ ರಾಧಾಕೃಷ್ಣ, ಉಪಾಧ್ಯಕ್ಷರಾದ ಶ್ರೀ ವಸಂತ ಶೆಟ್ಟಿ ಬೆಳ್ಳಾರೆ ಮತ್ತು ಶ್ರೀ ಶೋಭಾ ಗೌಡ, ಖಜಾಂಚಿ ಶ್ರೀಮತಿ ಆಶಾಲತ ಮಹದೇವ್, ಜಂಟಿ ಕಾರ್ಯದರ್ಶಿಗಳಾದ ಶ್ರೀಮತಿ ಅಶ್ವಿನಿ ಬಿ.ಎಸ್ ಮತ್ತು ಶ್ರೀ ಸಂತೋಷ್ ಜೆ, ಸದಸ್ಯರುಗಳಾದ ಡಾ. ವೆಂಕಟಾಚಲ ಜಿ. ಹೆಗಡೆ, ಶ್ರೀ ನಾರಾಯಣ ಬಿ., ಶ್ರೀ ಶಿವಪ್ಪ ಎಂ, ಶ್ರೀಮತಿ ಪೂಜಾ ಪಿ. ರಾವ್ ಶ್ರೀಮತಿ ಜಯಶ್ರೀ ಬಸವರಾಜ್, ಶ್ರೀಮತಿ ಶುಭಾ ದೇವಿಪ್ರಸಾದ್, ಶ್ರೀ ರಾಜಕುಮಾರ್ ನೀಲೂರ್, ಶ್ರೀ ಹರಿಕೃಷ್ಣ ಅವರನ್ನು ಅಭಿನಂದಿಸಲಾಯಿತು.

ಸ್ವರಾಂಜಲಿ ಕಲಾವಿದರಾದ ಶ್ರೀ ಕಾಶೀನಾಥ್ ಬಿರಾದರ್, ಶ್ರೀಮತಿ ಸೀಮಾ ಬಿರಾದರ್, ಶ್ರೀ ರಮೇಶ್, ಶ್ರೀ ನಟರಾಜ್, ಶ್ರೀ ಸತೀಶ್, ಶ್ರೀಮತಿ ಶುಭಾ ದೇವಿಪ್ರಸಾದ್, ಶ್ರೀಮತಿ ಪೂಜಾ ಪಿ. ರಾವ್, ಶ್ರೀಮತಿ ವಿದ್ಯಾ ಕಾರ್ತಿಕ್, ಶ್ರೀಮತಿ ರಚನಾ ಗೋವಿಂದರಾಜು, ಶ್ರೀ ಹೇಮಂತ್ ಶೃಂಗನಾಡು, ಶ್ರೀ ಎ.ಟಿ. ಶ್ರೀನಿವಾಸ್, ಶ್ರೀಮತಿ ಚೈತ್ರಾ ತೋಳ್ಪಾಡಿ, ಶ್ರೀಮತಿ ಪವಿತ್ರಾ, ಶ್ರೀ ಹನುಮಸಾಗರ್ ಮತ್ತು ಕು. ಅಭೀಷೇಕ್ ಉಭಾಳೆ ಅವರುಗಳು ಡಾ. ರಾಜಕುಮಾರ್ ಅವರ ಆಯ್ದ ಸುಮಧುರ ಹಾಡುಗಳನ್ನು ಹಾಡಿ ಬಂದಿದ್ದ ಪ್ರೇಕ್ಷಕರನ್ನು ರಂಜಿಸಿದರು. ಕಾರ್ಯಕ್ರಮವನ್ನು ಅಚ್ಚುಕಟ್ಟಾಗಿ ಗಿರೀಶ್ ಎಸ್ ರವರು ನಿರೂಪಿಸಿದರು.

ಈ ಅದ್ಭುತ ಕಾರ್ಯಕ್ರಮವನ್ನು ಅದ್ಭುತ ಯಶಸ್ವಿಗೊಳಿಸಿದ ಎಲ್ಲಾ ಪ್ರೇಕ್ಷಕರು, ಕಲಾವಿದರು ಮತ್ತು ದೆಹಲಿ ಕರ್ನಾಟಕ ಸಂಘದ ಆಡಳಿತ ಮಂಡಳಿಯನ್ನು ವಂದಿಸಿ ಕಾರ್ಯಕ್ರಮಕ್ಕೆ ತೆರೆ ಎಳೆಯಲಾಯಿತು.

***ಹರಿಪ್ರಿಯಾ ಎಸ್.***



# "ಅಜಾತಶತ್ರು ಎಂ.ಜಿ.ಕೆ. ಭಟ್ ಬೀಳ್ಕೊಡುಗೆ"




ಏಪ್ರಿಲ್ 26, ರವಿವಾರ ಬೆಳಿಗ್ಗೆ 11 ಗಂಟೆಗೆ ದೆಹಲಿ ಕನ್ನಡ ಶಿಕ್ಷಣ ಸಂಸ್ಥೆಯ ಸಭಾಂಗಣದಲ್ಲಿ ಗೋಕರ್ಣ ಮಂಡಳವು ತನ್ನ ಆಜೀವ ಸದಸ್ಯರಾದ ಭಿವಾಡಿಯ ಶ್ರೀ ಎಂ. ಗೋಪಾಲಕೃಷ್ಣ ಭಟ್ ಅವರಿಗೆ ಬೀಳ್ಕೊಡುಗೆ ಕಾರ್ಯಕ್ರಮವನ್ನು ದೆಹಲಿ ಕನ್ನಡ ಶಿಕ್ಷಣ ಸಂಸ್ಥೆಯ ಹಾಗೂ ದೆಹಲಿ ತುಳು ಸಿರಿಯ ಸಹಯೋಗದಲ್ಲಿ ಆಯೋಜಿಸಿತು. ಈ ಸಂದರ್ಭದಲ್ಲಿ ಉದ್ಯೋಗದಿಂದ ನಿವೃತ್ತಿ ಹೊಂದಿ ಮುಂಬೈಗೆ ತೆರಳುತ್ತಿರುವ ಗೋಪಾಲಕೃಷ್ಣ ಭಟ್ಟರ ಕುರಿತು, ಅವರೊಂದಿಗೆ ಒಡನಾಡಿದ ಕುರಿತು ಗೋಕರ್ಣ ಮಂಡಳದ ಅಧ್ಯಕ್ಷರಾದ ಪ್ರಸಾದ್ ಭಟ್, ದೆಹಲಿ ತುಳು ಸಿರಿಯ ಅಧ್ಯಕ್ಷರಾದ ವಸಂತ ಶೆಟ್ಟಿ ಬೆಳ್ಳಾರೆ, ದೆಹಲಿ ಕನ್ನಡ ಶಿಕ್ಷಣ ಸಂಸ್ಥೆಯ ಪ್ರಭಾರಿ ಅಧ್ಯಕ್ಷರಾದ ಡಾ. ಅವನೀಂದ್ರನಾಥ್ ರಾವ್, ಪ್ರಭಾರಿ ಕಾರ್ಯದರ್ಶಿಗಳಾದ ಕಾಶೀನಾಥ್ ಬಿರಾದಾರ ಅವರು ಮಾತನಾಡಿದರು. ಸಭೆಯಲ್ಲಿ ಉಪಸ್ಥಿತರಿದ್ದ ಶ್ರೀಹರಿ ಭಟ್ ಹಾಗೂ ಡಾ. ವೆಂಕಟಾಚಲ ಹೆಗಡೆಯುವರೂ ಕೂಡಾ ಗೋಪಾಲಕೃಷ್ಣ ಭಟ್ಟರ ನಿವೃತ್ತಿ ಜೀವನ ಸುಖಮಯವಾಗಿರಲಿ, ಮುಂಬೈನಲ್ಲಿಯೂ ಭಟ್ಟರು ದೆಹಲಿಯ ಕನ್ನಡಿಗರ ಪ್ರತಿನಿಧಿಯಾಗಿ ಕನ್ನಡ ಭಾವುಟ ಹಾರಿಸಲಿ ಎಂದು ಹಾರೈಸಿದರು.

ಇದೇ ಸಂದರ್ಭದಲ್ಲಿ ಈ ಮೂರೂ ಸಂಸ್ಥೆಗಳಲ್ಲದೇ ಸ್ವರಾಂಜಲಿ, ದೆಹಲಿ ಸಂಘಟನೆಯೂ ಸೇರಿ ನಡೆಸಿದ ಸನ್ಮಾನವನ್ನು ಸ್ವೀಕರಿಸಿ ಮಾತನಾಡಿದ ಎಂ.ಜಿ.ಕೆ ಭಟ್ ಅವರು ತಮ್ಮೆಲ್ಲರ ಪ್ರೀತಿಗೆ ನಾನು ಚಿರಋಣಿಯಾಗಿದ್ದೇನೆ, ಭಾವುಕನಾಗಿದ್ದೇನೆ ಎಂದು ಹೇಳಿದರು. ಕನ್ನಡದ ಮೇಲಿನ ಪ್ರೀತಿಯೇ ತಮ್ಮನ್ನು 80 ಕಿ.ಮೀ. ದೂರದ ಭಿವಾಡಿಯಿಂದ ದೆಹಲಿಯ ಕನ್ನಡ ಚಟುವಟಿಕೆಗಳಲ್ಲಿ ಪಾಲ್ಗೊಳ್ಳುವಂತೆ ಮಾಡಿತ್ತು ಎಂದು ಹೇಳುತ್ತಾ ಕಳೆದ 16 ವರ್ಷಗಳಲ್ಲಿ ಯಾರೆಲ್ಲ ತಮ್ಮೊಂದಿಗೆ ಒಡನಾಡಿದ್ದಾರೋ ಅವರನ್ನು ನೆನಪಿಸಿಕೊಂಡರು.

ವೇದಿಕೆಯ ಮೇಲೆ ಉಪಸ್ಥಿತರಿದ್ದ ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷರಾದ ಶ್ರೀ ರೇಣುಕುಮಾರ್ ಅವರು ದೆಹಲಿಯಿಂದ ತಾಯ್ನಾಡಿಗೆ ಹೋಗುತ್ತಿರುವ ಶ್ರೀ ಅವರಿಗೆ ಶುಭ ಹಾರೈಸಿದರು.

ಕಾರ್ಯಕ್ರಮದ ಮಧ್ಯದಲ್ಲಿ ದೆಹಲಿ ಕರ್ನಾಟಕ ಸಂಘದ ಚುನಾವಣೆಯಲ್ಲಿ ಆಯ್ಕೆಯಾದ ನೂತನ ಪದಾಧಿಕಾರಿಗಳನ್ನು ಹಾಗೂ ಸದಸ್ಯರನ್ನು ಅಭಿನಂದಿಸಲಾಯಿತು. ಇದೇ ವೇಳೆ ಹಾಜರಿದ್ದ ಮೈಸೂರಿನ ಜಗ್ಗು ಜಾದೂಗರ್ ಅವರಿಂದ ಜಾದೂ ಪ್ರದರ್ಶನ ನಡೆಯಿತು.

ಕುಮಾರಿ ಅಮೋಘಾಳ ಪ್ರಾರ್ಥನೆಯೊಂದಿಗೆ ಆರಂಭವಾದ ಈ ಕಾರ್ಯಕ್ರಮದ ಕೊನೆಯಲ್ಲಿ ಗೋಕರ್ಣ ಮಂಡಳದ ಕಾರ್ಯದರ್ಶಿ ಶ್ರೀ ಸಂತೋಷ್ ಉಪಾಧ್ಯಾಯ ಅವರು ಕನ್ನಡದ ಕಟ್ಟಾಳು ಎಂ. ಗೋಪಾಲಕೃಷ್ಣ ಭಟ್ ಅವರಿಗೆ ಅಭಿನಂದಿಸುತ್ತಾ, ಕಾರ್ಯಕ್ರಮದ ಆಯೋಜನೆಯಲ್ಲಿ ಸಹಕರಿಸಿದ ಹಾಗೂ ಆಗಮಿಸಿದ ಎಲ್ಲಾ ಸಭಿಕರಿಗೂ ವಂದನೆ ಅರ್ಪಿಸಿದರು. ದೆಹಲಿ ತುಳು ಸಿರಿಯ ಕಾರ್ಯದರ್ಶಿ ಅರವಿಂದ ಬಿಜ್ಜೈ ಅವರು ಇಡೀ ಕಾರ್ಯಕ್ರಮದ ನಿರೂಪಣೆಯನ್ನು ಬಹಳ ಅಚ್ಚುಕಟ್ಟಾಗಿ ನಿರ್ವಹಿಸಿದರು. ❑

***ಮಹೇಶ್ ಸುಬ್ಬರಾಯ***

## ಸಮಾಜಕ್ಕೆ ಅಥರ್ವವೇದದ ಕೊಡುಗೆ ಗಣನೀಯ ವೇ.ಮೂ. ರಮೇಶ ವರ್ಧನ್



ಏಪ್ರಿಲ್ 26, ರವಿವಾರ ಸಂಜೆ 5 ಗಂಟೆಗೆ ಗೋಕರ್ಣ ಮಂಡಳ, ನವದೆಹಲಿ ಆಯೋಜಿಸಿದ ಆನ್‌ಲೈನ್ ಉಪನ್ಯಾಸ ಕಾರ್ಯಕ್ರಮದಲ್ಲಿ ವೇದಮುರ್ತಿ ಶ್ರೀ ರಮೇಶ ವರ್ಧನ್ ಅವರು ಸಮಾಜಕ್ಕೆ ಅಥರ್ವವೇದದ ಕೊಡುಗೆ ಎಂಬ ವಿಷಯವಾಗಿ ತಿಳಿಯಪಡಿಸುತ್ತಾ ಅಥರ್ವ ವೇದಕ್ಕೆ ಆ ಹೆಸರು ಬಲು ಕಾರಣವೇನು? ಅದರಲ್ಲಿ ಬರುವ ಮಂತ್ರಗಳು ಸಮಾಜ ನಿರ್ಮಾಣದಲ್ಲಿ ಯಾವ ಪಾತ್ರ ವಹಿಸಿವೆ, ಸಮಾಜದಲ್ಲಿ ಪರಸ್ಪರ ವೈಮನಸ್ಸನ್ನು ತೊಡೆದು ಹಾಕುವಲ್ಲಿ ಅಥರ್ವವೇದದ ಮಂತ್ರಗಳ ಆಶಯವೇನು ಎಂಬಿತ್ಯಾದಿ ವಿವರಗಳನ್ನು ವೀಕ್ಷಕರಿಗೆ ಮನದಟ್ಟು ಮಾಡಿಕೊಟ್ಟರು. ವನಸ್ಪತಿ–ಔಷಧಗಳ ನಿರೂಪಣೆಯಲ್ಲಿ ಅಥರ್ವವೇದವು ಎಷ್ಟು ಸೂಕ್ಷ್ಮವಾಗಿ ಚಿಂತನೆ ನಡೆಸಿತ್ತು ಎಂಬುದಕ್ಕೆ ಉದಾಹರಣೆ ಕೊಡುತ್ತಾ ಅವರು ಕಪ್ಪೆ ಶೀತರಕ್ತ ಪ್ರಾಣಿ ಎಂಬುದನ್ನು ಸಾವಿರಾರು ವರ್ಷ ಹಿಂದೆಯೇ ಋಷಿಗಳು ತಿಳಿದಿದ್ದರಾದ್ದರಿಂದ ವ್ಯಕ್ತಿಯ ಜ್ವರರೋಗವನ್ನು ಯಾವ ರೀತಿ ಕಪ್ಪೆಗೆ ವರ್ಗಾಯಿಸುವ ಮೂಲಕ ಜ್ವರದಿಂದ ಮುಕ್ತಿ ಸಿಗುತ್ತಿತ್ತು ಎಂಬುದನ್ನು ಮಂತ್ರಗಳಲ್ಲಿ ಉಲ್ಲೇಖಿಸಿದ್ದಾರೆ ಎಂದು ತಿಳಿಸಿದರು. ಹತ್ತು ಹಲವು ವಿಷಯಗಳನ್ನೊಳಗೊಂಡಿರುವ ಅಥರ್ವವೇದಕ್ಕೆ ಜನರು ಮಾಟ ಮಂತ್ರಗಳಿಗೆ ಸಂಬಂಧಿಸಿದ್ದೆಂದು ಹಣೆಪಟ್ಟಿ ಕಟ್ಟಿರುವುದು ಖೇದಕರ, ವೇದಕ್ಕೂ ವಾಮಾಚಾರಕ್ಕೂ ಯಾವುದೇ ಸಂಬಂಧವಿಲ್ಲ ಎಂದು ಶ್ರೀ ರಮೇಶ ವರ್ಧನ್ ಹೇಳಿದರು.

ಈ ವಿದ್ವತ್ಪೂರ್ಣ ಉಪನ್ಯಾಸ ಕಾರ್ಯಕ್ರಮದಲ್ಲಿ ಉಪನ್ಯಾಸಕರ ಪರಿಚಯವನ್ನು ಗೋಕರ್ಣ ಮಂಡಳದ ಕಾರ್ಯದರ್ಶಿ ಸಂತೋಷ ಉಪಾಧ್ಯಾಯ ಅವರು ಮಾಡಿಕೊಟ್ಟರು. ಕಾರ್ಯಕ್ರಮ ಅಂತಿಮ ಭಾಗದಲ್ಲಿ ವೀಕ್ಷಕರೊಂದಿಗೆ ಪ್ರಶ್ನೋತ್ತರಗಳು ನಡೆದವು. ಕೊನೆಯಲ್ಲಿ ಅಧ್ಯಕ್ಷರಾದ ಪ್ರಸಾದ್ ಭಟ್ ಅವರು ವಂದನಾರ್ಪಣೆಗೈದು ಇಂತಹ ಆನ್‌ಲೈನ್ ಕಾರ್ಯಕ್ರಮಗಳನ್ನು ಮಂಡಳವು ಇನ್ನಷ್ಟು ಹಮ್ಮಿಕೊಂಡು ಯೂಟ್ಯೂಬಿನಲ್ಲಿ ದಾಖಲಿಸಲಿದೆ, ಇದರ ಸದುಪಯೋಗವನ್ನು ಎಲ್ಲರೂ ಪಡೆದುಕೊಳ್ಳುವಂತಾಗಲಿ ಎಂದು ಆಶಿಸಿದರು.❑

***ಸಂತೋಷ್ ಉಪಾಧ್ಯಾಯ***

# ನೊಯಿಡಾದಲ್ಲಿ ಜರುಗಿದ ಆಲೆಮನೆ'



ಏಪ್ರಿಲ್ 5, ರವಿವಾರದಂದು ನೊಯಿಡಾದ ರೋಸ್ ಗಾರ್ಡನ್‌ನಲ್ಲಿ ಗೋಕರ್ಣ ಮಂಡಳವು ತನ್ನ ಸಂಸ್ಕೃತಿಯ ಅಂಗವಾದ ಆಲೆಮನೆ ಹಬ್ಬವನ್ನು ವಿಶಿಷ್ಟವಾಗಿ ಆಯೋಜನೆ ಮಾಡಿತು. ಈ ಹಬ್ಬದಲ್ಲಿ ಪಾಲ್ಗೊಂಡ ಎಲ್ಲಾ ಸದಸ್ಯರು ಹಾಗು ಅತಿಥಿಗಳು ತಾಜಾ ಕಬ್ಬಿನ ಹಾಲನ್ನು ಶಿರಸಿಯಿಂದ ತಂದ ಖಾರಾ–ಮಂಡಕ್ಕಿ–ಚುಡುವಾಗಳೊಂದಿಗೆ ಸವಿದರು. ಇಷ್ಟೇ ಅಲ್ಲದೇ ಯಲ್ಲಾಪುರದ ನಂದಗಾರಿನ ಜನಪ್ರಿಯ ಬೆಲ್ಲವನ್ನು ಆಸ್ವಾದಿಸಿದರು.

ಗುಲಾಬಿ ಉದ್ಯಾನವನದಲ್ಲಿ ನಡೆದ ಈ ಕಾರ್ಯಕ್ರಮದ ಕೊನೆಯಲ್ಲಿ ನೆರೆದ ಸದಸ್ಯರು ಮಂಡಳಿಯ ಮುಂದಿನ ಚಟುವಟಿಕೆಗಳ ಕುರಿತು ವಿವರವಾಗಿ ಚರ್ಚಿಸಿದರು. ಇದೇ ಸಮಯದಲ್ಲಿ ಮಂಡಳಿಯ ಅಧ್ಯಕ್ಷರಾದ ಶ್ರೀ ಪ್ರಸಾದ್ ಭಟ್ ಅವರು ಹೊಸದಾಗಿ ಆಗಮಿಸಿದವರನ್ನು ಪರಿಚಯಿಸಿದರು ಹಾಗೂ ಮುಂದಿನ ದಿನಗಳಲ್ಲಿ ಇಂಥ ವಿಶಿಷ್ಟ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವ ಮೂಲಕ ಹವ್ಯಕ ಸಂಸ್ಕೃತಿಯ ಪರಿಚಯವನ್ನು ಜನರಿಗೆ ಮಾಡಿಕೊಡುವ ಮಹತ್ವವನ್ನು ಒತ್ತಿ ಹೇಳಿದರು. ಕಾರ್ಯಕ್ರಮದ ಕೊನೆಯಲ್ಲಿ ಮಾತನಾಡಿದ ಗೋಕರ್ಣ ಮಂಡಳದ ಕಾರ್ಯದರ್ಶಿ ಸಂತೋಷ್ ಉಪಾಧ್ಯಾಯ ಅವರು ಈ ವಿಶಿಷ್ಟ ಆಲೆಮನೆ ಆಯೋಜನೆಯಲ್ಲಿ ಪಾಲ್ಗೊಂಡು ಸಫಲಗೊಳಸಿದ ಎಲ್ಲರಿಗೂ ಧನ್ಯವಾದ ಹೇಳಿದರು. ❑

***ಅನುರಾಧಾ ಹೆಗಡೆ***

# ದೆಹಲಿಯಲ್ಲಿ ತುಳುನಾಡಿನ ಬಿಸುಪರ್ಬ ಸಂಭ್ರಮಾಚರಣೆ

ದೆಹಲಿ ತುಳುಸಿರಿ ವತಿಯಿಂದ ಇತ್ತೀಚೆಗೆ ದೆಹಲಿ ಕರ್ನಾಟಕ ಸಂಘದ ವಿಚಾರ ಸಂಕಿರಣ ಭವನದಲ್ಲಿ ತುಳುನಾಡಿನ ಬಿಸುಪರ್ಬವನ್ನು ಸಾಂಪ್ರದಾಯಿಕವಾಗಿ ಆಯೋಜಿಸಲಾಗಿತ್ತು.

ಅಧ್ಯಕ್ಷತೆ ವಹಿಸಿ ಮಾತನಾಡಿದ ದೆಹಲಿ ತುಳುಸಿರಿಯ ಅಧ್ಯಕ್ಷ ವಸಂತ ಶೆಟ್ಟಿ ಬೆಳ್ಳಾರೆ ಅವರು ತುಳುವರು ಜಗತ್ತಿನ ಯಾವ ಮೂಲೆಗೂ ಹೋದರೂ ತುಳುನಾಡಿನ ಮಣ್ಣಿನ ಸಂಸ್ಕೃತಿಯನ್ನು ಮರೆಯಲಾರರು. ತುಳುವರಿಗೆ ಹಬ್ಬಗಳು ಕೇವಲ ಸಂಭ್ರಮದ ಕ್ಷಣಗಳಲ್ಲ, ಅವುಗಳು ಮನಸ್ಸುಗಳನ್ನು ಒಂದುಗೂಡಿಸಿ ಒಬ್ಬರನೊಬ್ಬರು ಅರಿತು ಬದುಕುವ ಕ್ಷಣಗಳು. ಇಂತಹ ಆಚರಣೆಗಳು ಮುಂದಿನ ಯುವಪೀಳಿಗೆಯಲ್ಲಿ ಸಂಸ್ಕೃತಿಯ ಅರಿವನ್ನು ಜಾಗೃತಗೊಳಿಸಲು ಸಹಾಯಕ ಎಂದರು.

ಕಾರ್ಯಕ್ರಮದಲ್ಲಿ ಸಾಂಪ್ರದಾಯಿಕವಾದ ಬಿಸುಕಣಿಯಲ್ಲಿ ಜೋಡಿಸಿಟ್ಟ ಕನ್ನಡಿಯಲ್ಲಿ ತುಳುವರೆಲ್ಲರೂ ತಮ್ಮ ಮುಖವನ್ನು ಕಂಡು ಬಿಸುಪರ್ಬಕ್ಕೆ ಶುಭ ಹಾರೈಸಿದರು. ದೆಹಲಿ ಕರ್ನಾಟಕ ಸಂಘದ ಚುನಾವಣೆಯಲ್ಲಿ ಚುನಾಯಿತರಾದ ತುಳುಸಿರಿಯ ಸದಸ್ಯರನ್ನು ಅಭಿನಂದಿಸಲಾಯಿತು. ಆಚಾರ್ಯ ದೇವಿಪ್ರಸಾದ್ ಅವರು ಪಂಚಾಂಗ ಶ್ರವಣಗೈದರು. ದೆಹಲಿ ಕರ್ನಾಟಕ ಸಂಘದ ಕಾರ್ಯಕಾರಿ ಸಮಿತಿ ಸದಸ್ಯರುಗಳಾದ ಶ್ರೀಮತಿ ಪೂಜಾ ರಾವ್, ಶ್ರೀಮತಿ ಶುಭಾ ದೇವಿಪ್ರಸಾದ್ ಮತ್ತು ರವಿ ಮೂಡಬಿದಿರೆ, ಶ್ರೀಮತಿ ಚೈತ್ರಾಭಟ್ ಬಿಸುವಿನ ಆಚರಣೆ ಸಂಬಂಧಿತ ತುಳು ಹಾಡುಗಳನ್ನು ಪ್ರಸ್ತುತಪಡಿಸಿದರು. ಇದೇ ಸಂದರ್ಭದಲ್ಲಿ ಇದೇ ಸಮಯದಲ್ಲಿ ದೆಹಲಿಯ ಕ್ಯಾಂಪ್ಕೊ ಕಂಪೆನಿಯಿಂದ ಪುತ್ತೂರಿಗೆ ವರ್ಗಾವಣೆಗೊಂಡ ಮನೋಜ್ ಅವರನ್ನು ಅಭಿನಂದಿಸಿ ಬೀಳ್ಕೊಡಲಾಯಿತು. ಬಿಸುವಿನ ವಿಶೇಷ ಖಾದ್ಯಗಳೊಂದಿಗೆ ಭೋಜನವನ್ನು ಆಯೋಜಿಸಲಾಗಿತ್ತು.

ಕಾರ್ಯಕ್ರಮದಲ್ಲಿ ದೆಹಲಿ ಕರ್ನಾಟಕ ಸಂಘದ ಪ್ರಧಾನ ಕಾರ್ಯದರ್ಶಿ ರಾಧಾಕೃಷ್ಣ, ತುಳುಸಿರಿಯ ಮಾಜಿ ಅಧ್ಯಕ್ಷ ರಾಮಮೂರ್ತಿ, ಮಾಜಿ ಕಾರ್ಯದರ್ಶಿ ಶ್ರೀಹರಿ, ಡಾ. ನಿರಂಜನ ನಾಯ್ಕ್ ಹಾಗೂ ದೆಹಲಿ, ಗುರುಗಾಂವ್‌ನ ತುಳುವರು ಉಪಸ್ಥಿತರಿದ್ದರು. ತುಳುಸಿರಿಯ ಜೊತೆ ಕಾರ್ಯದರ್ಶಿ ಪ್ರಕಾಶ್ ಶೆಟ್ಟಿ ಉಳೆಪಾಡಿ ಸ್ವಾಗತಿಸಿದರು. ಖಜಾಂಚಿ ನಾಗರಾಜ ಎಂ. ವಂದಿಸಿದರು. ಕಾರ್ಯದರ್ಶಿ ಅರವಿಂದ ಬಿಜೈ ಕಾರ್ಯಕ್ರಮ ನಿರೂಪಿಸಿದರು. ಪದಾಧಿಕಾರಿಗಳಾದ ಹರ್ಷಿತಾ ಕುಶಾಲಪ್ಪ, ಕಾರ್ತಿಕ್ ರೈ, ಶ್ರೀಮತಿ ಅಶ್ವಿತಾ ಮಿಥೇಶ್ ಶೆಟ್ಟಿ, ಶ್ರೀಮತಿ ನಿರ್ಮಲಾ ನಾಗೇಶ್, ಯು.ಎ. ಶರೀಫ್, ಕೃಷ್ಣರಾಜ್ ಸಹಕರಿಸಿದರು.❑

***ಅರವಿಂದ ಬಿಜೈ***



# ವಿಶ್ವ ಪುಸ್ತಕ ದಿನಾಚರಣೆ



ದೆಹಲಿ ಕನ್ನಡ ಹಿರಿಯ ಮಾಧ್ಯಮಿಕ ಶಾಲೆಯ ವತಿಯಿಂದ ವಿಶ್ವಪುಸ್ತಕ ದಿನಾಚರಣೆ ಕಾರ್ಯಕ್ರಮವನ್ನು ಇತ್ತೀಚೆಗೆ ಶಾಲೆಯ ಗ್ರಂಥಾಲಯದಲ್ಲಿ ಆಯೋಜಿಸಲಾಗಿತ್ತು.

ಕನ್ನಡ ಕೃತಿಯ ಶೀರ್ಷಿಕೆಯನ್ನು ವಿದ್ಯಾರ್ಥಿಗಳು ಓದುವ ಮೂಲಕ ಕಾರ್ಯಕ್ರಮವನ್ನು ವಿನೂತನವಾಗಿ ಆರಂಭಿಸಲಾಯಿತು. ಬಳಿಕ ಮಾತನಾಡಿದ ದೆಹಲಿ ಕನ್ನಡ ಹಿರಿಯ ಮಾಧ್ಯಮಿಕ ಶಾಲೆಯ ಉಪ ಪ್ರಾಂಶುಪಾಲೆ ಶ್ರೀಮತಿ ಪ್ರೇಮಲತಾ ಬಿ. ಅವರು ಸಾಮಾಜಿಕ ಜಾಲತಾಣಗಳನ್ನೇ ಮನರಂಜನೆ ಎಂದು ಭ್ರಮಿಸಿ ಮೈಮರೆವ ಈ ಕಾಲದಲ್ಲಿ ಪುಸ್ತಕದ ಕುರಿತಾಗಿಯೇ ಒಂದು ಕಾರ್ಯಕ್ರಮವನ್ನು ಆಯೋಜಿಸಿ ಅದರಲ್ಲಿ ವಿದ್ಯಾರ್ಥಿಗಳೆಲ್ಲರೂ ಪಾಲ್ಗೊಂಡು ಪುಸ್ತಕ ದಿನಾಚರಣೆಯನ್ನು ಆಚರಿಸುತ್ತಿರುವುದು ಅನುಕರಣೀಯ. ವಿದ್ಯಾರ್ಥಿಗಳಲ್ಲಿ ಸೃಜನಶೀಲತೆಯನ್ನು, ಹೊಸ ಆಲೋಚನೆಯನ್ನು ಬೆಳೆಸುವಲ್ಲಿ ಪುಸ್ತಕದ ಪಾತ್ರ ಮಹತ್ತರವಾದುದು. ಆಧುನಿಕ ತಂತ್ರಜ್ಞಾನದ ಜೊತೆಗೆ ಸಾಮಾಜಿಕ ಜಾಲತಾಣಗಳ ಅಬ್ಬರಗಳ ನಡುವೆ ಇಂದು ಓದುವ ಮನಸ್ಸುಗಳು ಕ್ಷೀಣವಾಗುತ್ತಿವೆ. ಪೋಷಕರು, ಶಿಕ್ಷಕರು ಮಕ್ಕಳ ಬೌದ್ಧಿಕ ಸಾಮರ್ಥ್ಯಕ್ಕೆ ನಿಲುಕುವ ಪುಸ್ತಕಗಳನ್ನು ಒದಗಿಸಿ ಓದುವ ಆಸಕ್ತಿಯನ್ನು ಅವರಲ್ಲಿ ಬೆಳೆಸಬೇಕು. ಇಂದು ಈ ಕಾರ್ಯಕ್ರಮದಲ್ಲಿ ವಿದ್ಯಾರ್ಥಿಗಳು ಕನ್ನಡ ಕೃತಿಯ ಶೀರ್ಷಿಕೆಯನ್ನು ಓದಿಹೇಳಿ ಪುಸ್ತಕದ ಕುರಿತಾಗಿ ಆಸಕ್ತಿ ತೋರಿದ್ದು ಪ್ರಶಂಸಾರ್ಹವಾದ ಕಾರ್ಯ ಎಂದರು.

ಕನ್ನಡ ಶಿಕ್ಷಕ ಅರವಿಂದ ಬಿಜೈ ಅವರು ಮಾತನಾಡಿ ವಿದೇಶದಲ್ಲಿ ವಾರಾಂತ್ಯವನ್ನು ಪುಸ್ತಕವನ್ನು ಓದುವುದರ ಮೂಲಕ ಕಳೆಯುತ್ತಾರೆ. ಆ ಮೂಲಕ ತಮ್ಮ ಅಂತರಿಕ ಬೆಳವಣಿಗೆಗೆ ಒತ್ತು ನೀಡುತ್ತಾರೆ. ವಿದ್ಯಾರ್ಥಿಗಳು ಪುಸ್ತಕಗಳನ್ನು ಓದುವ ಅಭಿರುಚಿಯನ್ನು ಎಳವೆಯಲ್ಲಿಯೇ ಬೆಳೆಸಬೇಕು. ಯಾವುದಾದರೂ ಆಗಲಿ ಕೈಗೆ ಸಿಕ್ಕಿದ ಒಂದು ಪುಸ್ತಕವನ್ನು ಓದಿ, ಅದು ಮುಂದೆ ಅನೇಕ ಪುಸ್ತಕಗಳನ್ನು ಓದುವಂತೆ ಪ್ರೇರೆಪಿಸುತ್ತದೆ. ಪುಸ್ತಕವು ಜ್ಞಾನದೊಂದಿಗೆ ಜಂಜಾಟವಿಲ್ಲದ ಸಾಮ್ಯತೆಯ ಬದುಕು ನಡೆಸಲು ಅನುವು ಮಾಡಿಕೊಡುತ್ತದೆ ಎಂದು ಹೇಳಿದರು. ಕಾರ್ಯಕ್ರಮದಲ್ಲಿ ಶಾಲಾ ಗ್ರಂಥಪಾಲಕ ಕಮಲುದ್ದೀನ್ ಉಪಸ್ಥಿತರಿದ್ದರು. ❑

# ಬೇಸಿಗೆಯಲ್ಲಿ ಮರದ ತುಂಬೆಲ್ಲ ತೂಗುವ ಸ್ವರ್ಣ ಪುಷ್ಪ-ಅಮಲ್ತಾಸ್




ಕಕ್ಕೆ ಮರ ಅಥವ ಬ್ಯಾಟೆ ಮರ, ಸ್ವರ್ಣ ಪುಷ್ಪ, ಕಂದೆ ಮರ ಮತ್ತು ಕಾಡು ಕಂದೆ ಮರ ಎಂದೆಲ್ಲಾ ಕನ್ನಡದಲ್ಲಿ ಕರೆಯುವ ನಮ್ಮ ದೇಶಿ ಮರ ಮಾರ್ಚ್ ತಿಂಗಳಿಂದ ಜೂನ್ ತಿಂಗಳವರೆಗೆ ಮರದ ತುಂಬೆಲ್ಲ ಚಿನ್ನದ ಹೂಗಳು ಜೋತಾಡುವಂತೆ ಸೊಗಸಾಗಿ ಕಾಣುತ್ತದೆ.

**ಔಷಧ ಗುಣ:**

ಸಂಸ್ಕೃತದಲ್ಲಿ ಈ ಕಕ್ಕೆ ಗಿಡವನ್ನು ಅರಘ್ವಧ ಎಂದು ಕರೆಯಲ್ಪಡುತ್ತದೆ. ಅರಘ್ವದ ಎಂದರೆ ರೋಗವನ್ನು ನಾಶಮಾಡುವವನು. ಇದರ ವೈಜ್ಞಾನಿಕ ಹೆಸರು ಕ್ಯಾಸಿಯಾ ಫಿಸ್ತುಲಾ.

ಕಕ್ಕೆ ಗಿಡದಲ್ಲಿ ಬಿಡುವ ಉದ್ದನೆ ಕಾಯಿಗಳು ಮತ್ತು ಕಕ್ಕೆ ಗಿಡದ ಬೇರನ್ನು ಬಹಳ ಉಪಯುಕ್ತ ಔಷಧಗಳ ರೂಪದಲ್ಲಿ ಉಪಯೋಗಿಸಲಾಗುತ್ತದೆ. ಇದರ ತೊಗಟೆ, ಎಲೆ, ಹೂವು ಮತ್ತು ಕಾಯಿಯ ತಿರುಳನ್ನು ವಿವಿಧ ಆಯುರ್ವೇದ ಔಷಧಿಗಳಲ್ಲಿ ಬಳಸಲಾಗುತ್ತದೆ–ಮಧುಮೇಹ, ಕ್ಯಾನ್ಸರ್, ಚರ್ಮ ವ್ಯಾಧಿ ಮತ್ತು ಹೃದಯ ಖಾಯಿಲೆ ಮತ್ತು ಮುಂತಾದ ಸಮಸ್ಯೆಗಳಿಗೆ ಇದರಿಂದ ಔಷಧಿ ಮಾಡಲಾಗುತ್ತದೆ.

ಕೇರಳದಲ್ಲಿ ಕನ್ನಿಕೋನಾ ಎಂದು ಕರೆಯಲ್ಪಡುವ ಈ ಹೂವುಗಳು ಅವರ ವಿಶು (ಹೊಸ ವರ್ಷಾಚರಣೆ) ಹಬ್ಬದ ಆಚರಣೆಯಲ್ಲಿ ಬಹಳ ವಿಶೇಷವಾಗಿ ಪೂಜೆಯಲ್ಲಿ ಬಳಸುವುದಲ್ಲದೆ ಈ ಹೂವು ಕೇರಳ ರಾಜ್ಯದ ಹೂವಾಗಿದೆ.

ಥೈಲ್ಯಾಂಡ್ ದೇಶದ ರಾಷ್ಟ್ರೀಯ ಹೂವಾದ ಕಕ್ಕೆ ಹೂವು ಥೈಲ್ಯಾಂಡ್‌ನಲ್ಲಿ ರಚಾಪ್ರುಯೇಕ್ (Ratchaphruek) ಎಂದು ಕರೆಯಲ್ಪಡುತ್ತದೆ. ಗೋಲ್ಡನ್ ಶವರ್ ಎಂದು ಇಂಗ್ಲೀಷ್ನಲ್ಲಿ ಕರೆಯಲಾಪಡುವ ಈ ಕಕ್ಕೆ ಹೂವಿಗೆ ಹಿಂದಿಯಲ್ಲಿ ಅಮಲ್ತಾಸ್ ಎನ್ನುತ್ತಾರೆ. ಬೇಸಿಗೆಯ ಬಿಸಿಲಿನಲ್ಲಿ ಸ್ವರ್ಣ ಮಳೆಯಂತೆ ಪಳ ಪಳ ಹೊಳೆಯುತ್ತಿರುತ್ತದೆ.

**ಮನೆ ಮದ್ದು:**

ಬ್ಯಾಟೆ/ ಕಕ್ಕೆ ಹಣ್ಣಿನ ಅಂಟನ್ನ ತೆಗೆದು ರಾತ್ರಿ ನೀರಿನಲ್ಲಿ ನೆನೆಸಿಟ್ಟು ಮುಂಜಾನೆ ಶೋದಿಸಿ ಕುಡಿದರೆ ಮಲಬದ್ದತೆ ಸಮಸ್ಯೆ ನಿವಾರಣೆಯಾಗುತ್ತದೆ. ❑

Delhi Karnataka Sangha Abhimata
April 2026, Vol. No.36, Issue No. 7, Price Rs.1/-
RNI Regn. No. 53405/91, DL-SW-01/4016/22-24
Date of Publication : April 8th / 9th, Posting Date : 10th / 11th, Total Pages-20 Monthly-Language Kannada, POSTED AT RMS DELHI-110006
Printed & Published by Radhakrishna, General Secretary on behalf of Delhi Karnataka Sangha (R)Rao Tularam Marg, Sector-12, R.K.Puram, New Delhi-110022
Tel: 26109615, Printed at Saujanya Printing Press B-303, Okhla Industrial Area, Phase-I, New Delhi-110020, Tel: 40520770, Editor: Renuka Nidagundi

